ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೧ ಮಾರ್ಚ್, ೨೦೦೧ ಸಂಚಿಕೆ ೮

ಇಂದಿನ ಸಮಸ್ಯೆಗಳು

ಗುಜರಾತ್ ಮತ್ತು ಕಾಶ್ಮೀರ

★

ಪರಿಸರ ಸಂರಕ್ಷಣೆ ಏನು ಹೇಗೆ?

★

ಸಂಹಾರಕಾಸ್ತ್ರಗಳು ವಿಶ್ವಸಂಸ್ಥೆಯ ವಶಕ್ಕೆ

★

ಮಾತಿನ ಉಪಟಳ

★

ಗೋವಂಶ ಹತ್ಯೆಯ ಕಳಂಕವನ್ನು ದೂರಮಾಡಿ

★

ಅಬ್ದುಲ್ ಗಫಾರ್‌ಖಾನ್

★

ಸದಾಚಾರ ವಿಧಾಯಿನಿ

★ ಈ ಸಂಚಿಕೆಯಲ್ಲಿ ★

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೧ ಸಂಚಿಕೆ : ೮

ಮಾರ್ಚ್ ೨೦೦೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

....

ಚಂದಾ ವಿವರ :

ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ : ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :
ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ೪೩೧.
ದೂರವಾಣಿ : ೦೮೨೩೬/೫೮೭೨೫೪

ನಾ ಪ್ರೀತಿಸಿದ್ದು ನನ್ನನ್ನೆ
ನನ್ನ ಅಹಂಕಾರವನ್ನು
ನನ್ನ ದುಃಖವನ್ನು
ನನ್ನ ಕೆಟ್ಟತನವನ್ನು
ಆದವ್ಯಾವಾಗಿ ಪ್ರೀತಿಸಿದ್ದು ನಾನೆ.
ಪ್ರೀತಿ ಬಟ್ಟಲು
ತುಂಬುವ ಮೊದಲೆ
ಆಸೆಬರುಕಿಯಂತೆ
ಕುಡಿಯುತ್ತಿದ್ದವಳು ನಾನೆ.
ಒಮ್ಮೆ ಮಾತ್ರ ನನಗೆ
ಗೊತ್ತಿಲ್ಲದ ಹಾಗೆ
ಬಟ್ಟಲು ತುಂಬಿ ತುಳುಕಿ
ಚೆಲ್ಲಿತು ನಿನ್ನ ಮೇಲೆ
ಅದೇ ಕೊನೆ –
ಆಮೇಲೆ ಪ್ರೀತಿಸಿದ್ದು ನಿನ್ನನೆ.

– ಸವಿತಾ ನಾಗಭೂಷಣ್

ಜನಪದ ಸಂಗತಿ........................

ಗುಜರಾತ್‌ನಲ್ಲಿ ಭೀಕರವಾದ ಭೂಕಂಪನವಾಗಿ ಒಂದು ತಿಂಗಳು ಕಳೆಯಿತು. ಅಲ್ಲಿಯ ನಿವಾಸಿಗಳು ಕ್ರಮೇಣ ಹೊಸ ಜೀವನ ಪ್ರಾರಂಭಿಸಿದ್ದಾರೆ. ಕಾಲ ಮುಂದು–ಮುಂದಕೆ ಸರಿದಂತೆ ಮನುಷ್ಯನ ಎಲ್ಲ ಪ್ರಕಾರದ ದುಃಖ, ಕಷ್ಟ, ನಷ್ಟಗಳು ನೆನಪಿನಂಗಳದಿಂದ ಜಾರಿಹೋಗುತ್ತವೆ. ಜೀವನದ ಸವಾಲುಗಳು, ಬದುಕಬೇಕಾಗಿರುವ ಅನಿವಾರ್ಯತೆ, ಆತ್ಮ ವಿಶ್ವಾಸ, ಸಮಾಜದ ಸಹಾಯ ಇವೆಲ್ಲವೂ ಅವನನ್ನು ಹೊಸ ಮನುಷ್ಯನನ್ನಾಗಿ ಮಾಡುತ್ತವೆ. ಈ ಮಾತಿನ ಪ್ರತ್ಯಕ್ಷ ಉದಾಹರಣೆ ಗುಜರಾತಿನ ಭುಜ್ ಮತ್ತು ಇತರ ಸ್ಥಳಗಳಲ್ಲಿ ಕಾಣಸಿಗುತ್ತದೆ; ಬದುಕು ಎಂಥ ವೈಚಿತ್ರ್ಯಗಳಿಂದ ಕೂಡಿದೆ ಎಂಬುದು ಅಲ್ಲಿ ನೋಡಸಿಗುತ್ತದೆ; ಎಲ್ಲ ಪ್ರಕಾರದ ವಿಜ್ಞಾನಿಗಳಿಗೆ, ಶಾಸ್ತ್ರಜ್ಞರಿಗೆ, ಸಾಹಿತಿಗಳಿಗೆ, ಸಾಮಾಜಿಕ ಸಂಘಟನೆಗಳಿಗೆ ಅಲ್ಲಿ ಅಧ್ಯಯನಕ್ಕಾಗಿ ವಿಪುಲ ಅವಕಾಶವಿದೆ. ಗುಜರಾತಿನ ಭೂಕಂಪವು ಮನುಷ್ಯನ ಜೀವನ ವ್ಯವಸ್ಥೆಯ ಒಂದು ಮೂಲಭೂತ ವಿಚಾರಕ್ಕೇ ಸವಾಲು ಹಾಕಿದೆ. ಅವನು ತನ್ನ ಸಂರಕ್ಷಣೆಗಾಗಿ, ನೆಮ್ಮದಿಗಾಗಿ ಮನೆ ಕಟ್ಟಿಕೊಳ್ಳುತ್ತಾನೆ; ಆದರೆ ಆ ಮನೆಯೇ ಬಿದ್ದು ಅವನ ಮರಣಕ್ಕೆ ಕಾರಣವಾಗುತ್ತದೆ ! ಈ ವಿಚಿತ್ರದಿಂದ ಅವನಿಗೆ ಬಿಡುಗಡೆ ಇಲ್ಲ. ಆದರೂ ಸಹ ಸೌಧಗಳ ನಿರ್ಮಾಣದ ಬಗ್ಗೆ ಇರುವ ಅವನ ವ್ಯಾಮೋಹ ತಪ್ಪಿಲ್ಲ. ಅವನಿಗೆ ಬುದ್ಧಿ ಹೇಳುವವರು ಯಾರು ?

❖ ❖ ❖ ❖

ಕಾಶ್ಮೀರದಲ್ಲಿ ಏಕಪಕ್ಷೀಯ ಕದನ ವಿರಾಮದ ಅವಧಿಯನ್ನು ಭಾರತ ಸರ್ಕಾರ ಮೂರನೇ ಬಾರಿಗೆ ವಿಸ್ತರಿಸಿದೆ. ಈ ಸಲದ ಅವಧಿ ಮೇ ತಿಂಗಳ ಕೊನೆಯವರೆಗೆ – ಅಂದರೆ ಮೂರು ತಿಂಗಳ ಕಾಲಕ್ಕೆ – ವಿಸ್ತರಿಸಲ್ಪಟ್ಟಿದೆ. ಇದು ಬಹುದಿಟ್ಟವಾದ ನಿಲುವು; ಸೂಕ್ತ ನಿಲುವೂ ಸಹ. ಕಾಶ್ಮೀರದ ಸಮಸ್ಯೆಯ ಪರಿಹಾರಕ್ಕೆ ಹಿಂಸಾಮಾರ್ಗ ಎಂದಿಗೂ ಅನುಕೂಲಕರವಾಗಲಾರದು. ಏಕೆಂದರೆ ಹಿಂಸೆಯಿಂದ ಪ್ರತಿಹಿಂಸೆಯೇ ಹುಟ್ಟುತ್ತ ಹೋಗುತ್ತದೆ. ಅಲ್ಲದೆ, ಯಾವುದೇ ಒಂದು ಜಗಳವಿರಲಿ, ಆದರಲ್ಲಿ ತೊಡಗಿರುವ ಯಾವುದಾದರೂ ಒಂದು ಪಕ್ಷವು ತಿಳುವಳಿಕೆಯಿಂದ, ಸಂಯಮದಿಂದ ವರ್ತಿಸಿದರೇನೆ ಆ ಜಗಳವು ಮುಗಿಯುತ್ತದೆ. ಅಂಥ ಒಂದು ಸಾತ್ವಿಕವಾದ ಧೋರಣೆಯನ್ನು ಭಾರತ ಹೊಂದಿದೆ. ಎದುರಾಳಿ ಪಾಕಿಸ್ತಾನ ಇದನ್ನು ಅರ್ಥಮಾಡಿಕೊಳ್ಳಬೇಕು; ವಿಶ್ವದ ಬೇರೆಲ್ಲ ರಾಷ್ಟ್ರಗಳು ಈ ಕುರಿತು ಪಾಕಿಸ್ತಾನದ ಮೇಲೆ ನೈತಿಕ ಒತ್ತಡ ತರಬೇಕು.

೭ ನೇ ಪುಟನೋಡಿ

ಪರಿಸರ ಸಂರಕ್ಷಣೆ – ಏನು, ಹೇಗೆ?

– ಸಂತೋಷ್ ಕೌಲಗಿ

ಪರಿಸರ ಸಂರಕ್ಷಣೆ ಏನು ಮತ್ತು ಹೇಗೆ ಎಂಬುದರಲ್ಲಿ ಎರಡು ಪ್ರಶ್ನೆಗಳು ಅಡಗಿವೆ. ಒಂದನೆಯದು ಪರಿಸರ ಸಂರಕ್ಷಣೆ ಎಂದರೆ ಏನು ಎಂಬುದಾದರೆ, ಎರಡನೆಯದು ಅದನ್ನು ಮಾಡುವುದು ಹೇಗೆ ಎಂಬುದು. ಕೇವಲ ಮೊದಲ ಪ್ರಶ್ನೆಗೆ ಉತ್ತರವಾದರೆ ಉರುಹೊಡೆದು ಕೈಕಟ್ಟಿನಿಂತು ಉತ್ತರಹೇಳುವ ವಿದ್ಯಾರ್ಥಿಯಂತೆ ನಾನೂ ಸಹ ಪರಿಸರ ಸಂರಕ್ಷಣೆ ಎಂದರೆ, "ನಮ್ಮ ಸುತ್ತಲಿನ ಸ್ವಾಭಾವಿಕ ಸಂಪನ್ಮೂಲಗಳನ್ನು ಸಂರಕ್ಷಿಸಿ ನಾವೂ ಬದುಕಿ, ನಮ್ಮ ಸಹ ಜೀವಿಗಳೂ ಬದುಕಲು ಅನುವು ಮಾಡಿಕೊಟ್ಟು, ಸುಂದರವಾದ ಈ ಭೂಮಿಯನ್ನು ತನ್ನೆಲ್ಲ ಸೌಂದರ್ಯಗಳೊಂದಿಗೆ ಮುಂದಿನ ತಲೆಮಾರಿಗೆ ಒಪ್ಪಿಸುವುದು" ಎಂದು ಹೇಳಿ ಕೈತೊಳೆದುಕೊಳ್ಳಬಹುದು. ಆದರೆ ಈ ಪ್ರಶ್ನೆಯೊಂದಿಗೆ ತಗಲಿ ಕೊಂಡಿರುವ ಪ್ರಶ್ನೆ 'ಹೇಗೆ' ಎಂಬುದು ಹಾಗೆ ಮಾಡಲು ಬಿಡುತ್ತಿಲ್ಲ.

ಪರಿಸರ ಸಂರಕ್ಷಣೆ ಎಂಬುದು 'ಯಕ್ಷ'ನ ಪ್ರಶ್ನೆಗಳಲ್ಲಿ ಒಂದಾಗಬಹುದಾದ ಎಲ್ಲಾ ಅರ್ಹತೆಯನ್ನೂ ಪಡೆದಿದೆ. ಯಕ್ಷನು ಈ ಪ್ರಶ್ನೆಯನ್ನು ಯುಧಿಷ್ಠಿರನಿಗೆ ಕೇಳಿದ್ದರೆ ಅವನು ಅದಕ್ಕೆ ಉತ್ತರಿಸದೆ ಅವನ ಸಹೋದರರನ್ನು ಉಳಿಸಿಕೊಳ್ಳಲಾಗದೆ ಮಹಾಭಾರತದ ಮುಂದಿನ ಭಾಗ ಬೇರೆಯದೇ ಆದ ತಿರುವು ಪಡೆಯುತ್ತಿತ್ತು ಎಂಬುದು ನನ್ನ ಅಭಿಮತ.

ಪರಿಸರ ಸಂರಕ್ಷಣೆ ಎಂದರೆ ರಸ್ತೆಯ ಬದಿಯಲ್ಲಿ ನಾಲ್ಕಾರು ಮರಗಳನ್ನು ನೆಡುವುದಷ್ಟೆಯೆ? ಇಲ್ಲವೆ, ಪರಿಸರ ದಿನಾಚರಣೆಯ ದಿನ ಕೆಲಸಕ್ಕೆ ಬಾರದ ಪರಿಸರದ ಬಗೆಗಿನ ಭಾಷಣ ಮಾಡಿದರೆ ಮುಗಿಯಿತೆ?

ಪರಿಸರ ಸಂರಕ್ಷಣೆಯ ಪ್ರಶ್ನೆಯನ್ನು ಇಷ್ಟೊಂದು ಸರಳಗೊಳಿಸಲು ಸಾಧ್ಯವಿಲ್ಲ. ಪರಿಸರ ಸಂರಕ್ಷಣೆಯು ಅತ್ಯಂತ ಮಹತ್ವದ ವಿಚಾರ. ಹಾಗೆಯೇ ಅತ್ಯಂತ ಚರ್ಚಾಸ್ಪದ ವಿಚಾರವೂ ಹೌದು. ಅಂತೆಯೇ ಅತ್ಯಂತ ಗೋಜಲಿನ ವಿಚಾರವೂ ಆಗಿದೆ. ಈ ಗೋಜಲನ್ನು ಬಿಡಿಸುವ ಪ್ರಯತ್ನ ಮಾಡುವ ಮುಂಚೆ ಈ ಗೋಜಲಿನ ಚರಿತ್ರೆಯನ್ನೂ, ಗೋಜಲಿಗೆ ಇರಬಹುದಾದ ಕಾರಣವನ್ನೂ ನೋಡಲು ಪ್ರಯತ್ನಿಸಿದರೆ ಗೋಜಲಿನ ದಾರದ ತುದಿ ಎಲ್ಲಿದೆ ಎಂಬುದು ಹೊಳೆಯಬಹುದು.

ಪರಿಸರ ಸಂರಕ್ಷಣೆಯ ವಿಚಾರ ಅಥವಾ ಪರಿಸರವಾದವನ್ನು ನಾವು ಮೊದಲು ಕೈಗಾರಿಕಾ ಕ್ರಾಂತಿಯೊಂದಿಗೆ ನೋಡಬಹುದು. ಅಲ್ಲಿಯ ವರೆಗೆ ಪರಿಸರದ ವಿಚಾರ ಕವಿಗಳಿಗೆ, ಸೌಂದರ್ಯೋಪಾಸಕರಿಗೆ, ಪ್ರೇಮಿಗಳಿಗೆ ಮಾತ್ರ ಸೀಮಿತವಾದ ವಿಚಾರವಾಗಿತ್ತು. ಇದಕ್ಕೆ ಉದಹರಿಸಲು ೪ನೇ ಶತಮಾನದ ಕಾಳಿದಾಸನ ವರೆಗೆ ಹೋಗಬಹುದು. ಇವರನ್ನು ಬಿಟ್ಟರೆ ಕೇವಲ ವೈಜ್ಞಾನಿಕ ವಿಶ್ಲೇಷಣೆ ಮತ್ತು ಕುತೂಹಲದಿಂದ ಪರಿಸರದ ಕಡೆ ನೋಡಿದ ಚಾರ್ಲ್ಸ್ ಡಾರ್ವಿನ್‌ನಂತಹ ವಿಜ್ಞಾನಿಗಳು ಇದ್ದಾರೆ. ಆದರೆ ಪರಿಸರ ವಿಚಾರಕ್ಕಿರುವ ಸಾಮಾಜಿಕ ಆಯಾಮದ ಅರಿವಾದದ್ದು ಈಗ ಹೇಳಿದಂತೆ ಕೈಗಾರಿಕಾ ಕ್ರಾಂತಿಯ ನಂತರವೇ.

ಬಹಳ ಸರಳವಾಗಿದ್ದ ಸಾಮಾಜಿಕ ವ್ಯವಸ್ಥೆ ಮತ್ತು ಬದುಕುವ ರೀತಿ ಕೈಗಾರಿಕಾ ಕ್ರಾಂತಿಯಿಂದಾಗಿ ಸಂಪೂರ್ಣ ಬದಲಾಗಿ ಹೋಯಿತು. ಹೊಸ ತಂತ್ರ ಜ್ಞಾನಗಳ ಬಳಕೆಯಿಂದಾಗಿ ಸ್ವಾಭಾವಿಕ ಸಂಪನ್ಮೂಲಗಳ ಬಳಕೆ ಶೋಷಣೆಯ ಪ್ರಮಾಣಕ್ಕೇರಿತು. ವೈದ್ಯಕೀಯ ಕ್ಷೇತ್ರಗಳ ಆವಿಷ್ಕಾರಗಳಿಂದಾಗಿ ಮನುಷ್ಯನ ಆಯುಷ್ಯದಲ್ಲಿ ಹೆಚ್ಚಳಿಕೆ ಆಯಿತು. ಇದರಿಂದ ಭೂಮಿಯ ಮೇಲಿನ ಜನಸಂಖ್ಯೆ ಹೆಚ್ಚಿತು. ಹೆಚ್ಚು ಉತ್ಪಾದನೆ, ಹೆಚ್ಚು ಬಳಕೆ ಹೀಗೆ ಎಲ್ಲವೂ ಸೇರಿ ಪರಿಸರ ಧ್ವಂಸವಾಗತೊಡಗಿತು.

ಒಟ್ಟಾರೆ ಭೂಮಿ ಎಂಬುದು ಮನುಷ್ಯನಿಗೆ ಏನು ಬೇಕೋ ಅದನ್ನು ದೋಚಲು ಮಾಲೀಕನಿಲ್ಲದ ಅಂಗಡಿಯಂತೆಯೂ, ಬೇಡವಾದದ್ದನ್ನು ಬಿಸಾಡಲು ಗಲೀಜು ಮಾಡಿ ನೀರು ಹಾಕದೆ ಬರಬಹುದಾದ ಸಾರ್ವಜನಿಕ ಶೌಚಾಲಯ ಗಳಂತೆಯೂ ಆಗತೊಡಗಿತು.

ಕೈಗಾರಿಕೆಗಳ ಬಕಾಸುರ ಹಸಿವು ವ್ಯವಸಾಯದ ಭೂಮಿಯ ಮೇಲೆ ಅಗಾಧ ಒತ್ತಡವನ್ನು ತರತೊಡಗಿತು. ರೈತರು ಆಹಾರ ಬೆಳೆಗಳಿಗೆ ಬದಲಾಗಿ ಕೈಗಾರಿಕೆಗಳಿಗೆ ಬೇಕಾದ ಮಾರುಕಟ್ಟೆ ದೃಷ್ಟಿಯುಳ್ಳ ಬೆಳೆಗಳನ್ನು ಬೆಳೆಯ ತೊಡಗಿದರು. ಇದರಿಂದಾಗಿ ಮಣ್ಣಿನ ಫಲವತ್ತತೆ ವರ್ಷದಿಂದ ವರ್ಷಕ್ಕೆ ಕ್ಷೀಣಿಸತೊಡಗಿತು ಮತ್ತು ೨೦ನೇ ಶತಮಾನದ ಪ್ರಾರಂಭದೊಂದಿಗೆ ಮಾನವ ಚರಿತ್ರೆಯಲ್ಲಿ ಮೊದಲ ಬಾರಿಗೆ ಪರಿಸರದ ವಿಷಯಕ್ಕೆ ಸಂಬಂಧಿಸಿ ದಂತೆ ಸಂದಿಗ್ಧ ಪರಿಸ್ಥಿತಿಯೊಂದು ಬರತೊಡಗಿತು.

ಆಗ ವರ್ಡ್ಸ್‌ವರ್ತ್‌ನಂತಹ ಕವಿಗಳು, ಗಾಂಧೀಜಿಯಂತಹ ಜನಪರ ಹೋರಾಟಗಾರರು ಕೇಳಿದ ಪ್ರಶ್ನೆ, "ಕೈಗಾರಿಕಾ ಕ್ರಾಂತಿತಂದ ಸಂಪತ್ತು ಮತ್ತು

ಏಳ್ಗೆ ಸುಸ್ಥಿರವಾದದ್ದೇ?" ಈ ಮೂಲಭೂತ ಪ್ರಶ್ನೆಗೆ ಉತ್ತರಿಸಲು ಆಗ ಯಾರಿಗೂ ಸಮಯವಾಗಲೀ, ಸಹನೆಯಾಗಲೀ ಇರಲಿಲ್ಲ. ಈಗಲೂ ಸಹ ನಾವು ಹಿಡಿದಿರುವ ದಾರಿಯಿಂದಾಗಿ ನಮಗೂ ಸಹ ಉತ್ತರಿಸಲು ಧೈರ್ಯವಿಲ್ಲ.

ಇಂದು ಮುಂದುವರೆದ ದೇಶಗಳು ಕಳೆದ ೪೦-೫೦ ವರ್ಷಗಳಲ್ಲಿ ವಿಲಾಸಿ ಜೀವನ ವಿಧಾನವನ್ನು ತಮ್ಮ ಜೀವನ ವಿಧಾನವನ್ನಾಗಿಯೇ ಮಾಡಿಕೊಂಡಿವೆ. ಕೊಳ್ಳುಬಾಕತನ ತಮ್ಮ ಮೂಲಭೂತ ಹಕ್ಕೆಂದು ಅವು ಭಾವಿಸಿವೆ. ತಮ್ಮ ಈ ಜೀವನ ವಿಧಾನಕ್ಕೆ ಅಡ್ಡಿಬರಬಹುದಾದ ಯಾವುದೇ ಶಕ್ತಿಯನ್ನು ಮೂಲಭೂತವಾದಿಗಳಿಗಿಂತ ವ್ಯವಸ್ಥಿತವಾಗಿ ಎದುರಿಸುವ ರೀತಿಯನ್ನು ಕಂಡು ಕೊಂಡಿವೆ. ಉತ್ತರಾರ್ಧ ಗೋಲದ ಈ ದೇಶಗಳು ತಮ್ಮ ಐಶಾರಾಮ ಜೀವನದ ಜೊತೆಗೆ ತಮ್ಮ ಪರಿಸರವನ್ನು ಸ್ವಚ್ಛವಾಗಿಡಲು, ಸ್ವಾಭಾವಿಕ ಸಂಪನ್ಮೂಲಗಳನು ಕಾಪಾಡಿಕೊಳ್ಳಲು ದಕ್ಷಿಣ ಗೋಲಾರ್ಧದ ಬಡರಾಷ್ಟ್ರಗಳನ್ನೂ, ಅವುಗಳ ಸ್ವಾಭಾವಿಕ ಸಂಪನ್ಮೂಲಗಳನ್ನೂ ಬಹಳ ನಾಜೂಕಾಗಿ ಶೋಷಿಸಬಹುದಾದ ಹೊಸಹೊಸ ವಿಧಾನಗಳನ್ನೂ ಕಂಡುಕೊಂಡಿವೆ. ತಾವೂ ಒಂದು ದಿನ ಶ್ರೀಮಂತ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲುತ್ತೇವೆ ಎಂಬ ಭ್ರಮೆಯೊಂದಿಗೆ ದಕ್ಷಿಣ ಗೋಲಾರ್ಧದ ರಾಷ್ಟ್ರಗಳು ಆ ಸಾಲನ್ನು ತಲುಪಲು ತಮ್ಮ ಪರಿಸರವನ್ನು ಬಲಿಕೊಡುತ್ತಿವೆ. ದಕ್ಷಿಣ ದೇಶಗಳ ಈ ನಿಲುವಿನಿಂದಾಗಿ ಈ ದೇಶಗಳಲ್ಲೂ ಒಂದು ವರ್ಗ ಮಾತ್ರ ಅಮೇರಿಕಾ ಮಾದರಿಯ ಜೀವನ ವಿಧಾನವನ್ನು ನಡೆಸುವ ಶಕ್ತಿ ಪಡೆಯುತ್ತಿದೆ.

ಪರಿಸರದ ದೃಷ್ಟಿಯಿಂದಲೂ ಇಂದು ಸಾಮಾಜಿಕವಾಗಿ ಮೂರು ವರ್ಗಗಳು ಆಗಿಬಿಟ್ಟಿವೆ. ಅವು ಯಾವುವೆಂದರೆ:-

1) ಸರ್ವಭಕ್ಷಕ ವರ್ಗ
2) ಪರಿಸರಾವಲಂಬಿ ವರ್ಗ
3) ಪರಿಸರ ನಿರಾಶ್ರಿತರ ವರ್ಗ

ಸರ್ವ ಭಕ್ಷಕ ವರ್ಗವೆಂದರೆ ಪ್ರಕೃತಿ ಕೊಡುವ ಸಕಲ ಸಂಪತ್ತನ್ನೂ ಬಳಸಿ ಐಶಾರಾಮ ಜೀವನ ನಡೆಸುವ ವರ್ಗ. ಕೊಳ್ಳುಬಾಕ ಸಂಸ್ಕೃತಿಗೆ ತೆರೆದ ಕೊಳ್ಳುತ್ತಿರುವ ಎಲ್ಲ ಜನರೂ ಈ ವರ್ಗಕ್ಕೆ ಸೇರುತ್ತಾರೆ.

ಪರಿಸರಾವಲಂಬಿ ವರ್ಗವೆಂದರೆ ತಮ್ಮ ದಿನ ದಿನದ ಬದುಕಿಗಾಗಿ ಪರಿಸರವನ್ನು ಅವಲಂಬಿಸಿರುವ ವರ್ಗ. ಒಣ ಭೂಮಿಯ ರೈತರು, ಕೃಷಿ ಕಾರ್ಮಿಕರು ಮುಂತಾದವರು ಈ ವರ್ಗಕ್ಕೆ ಸೇರುತ್ತಾರೆ. ಇಡೀ ಸಮಾಜವು ಪರಿಸರಾವ

ಲಂಬಿ ವರ್ಗವಾಗಿದ್ದರೆ ಯಾವುದೇ ಸಮಸ್ಯೆಯಿರುವುದಿಲ್ಲ. ಗಾಂಧೀಜಿಯವರು ಹೇಳಿದ ಈ ಮಾತು, "ಪ್ರಕೃತಿಗೆ ಮನುಷ್ಯನ ಅಗತ್ಯತೆಗಳನ್ನು ಪೂರೈಸುವ ಶಕ್ತಿಯಿದೆ ದುರಾಸೆಗಳನ್ನಲ್ಲಾ" ಎಂಬ ಮಾತು ಎಲ್ಲರಿಗೂ ಅರ್ಥವಾಗಿ ಈ ವರ್ಗ ಶಕ್ತಿಶಾಲಿಯಾಗಿ ಬೆಳೆಯುತಿತ್ತು.

ಇನ್ನು ಪರಿಸರ ನಿರಾಶ್ರಿತರ ವರ್ಗ. ಸರ್ವ ಭಕ್ಷಕ ವರ್ಗದ ಸುಖೀ ಜೀವನಕ್ಕಾಗಿ ತಮ್ಮದಾಗಿದ್ದ ಪರಿಸರದ ಆಧಾರವನ್ನು ಬಲಿಕೊಟ್ಟು ಅಲ್ಲೂ ಸಲ್ಲದ, ಇಲ್ಲೂ ಸಲ್ಲದ ವರ್ಗ. ದೊಡ್ಡ ದೊಡ್ಡ ಯೋಜನೆಗಳಿಂದಾಗಿ ಎತ್ತಂಗಡಿ ಗೊಂಡ ಜನ. ನಗರಗಳ ಕೊಳಚೆಗೇರಿಗಳಲ್ಲಿ ವಾಸಿಸುವ ಜನ, ಅರಣ್ಯ ಸಂರಕ್ಷಣೆಯ ನೆಪದಲ್ಲಿ ಹೊರದೂಡಲ್ಪಟ್ಟ ಗಿರಿಜನರು ಇವರೆಲ್ಲರೂ ಸೇರುತ್ತಾರೆ. ಇಂದು ಯಾವುದಾದರೂ ಒಬ್ಬ ವ್ಯಕ್ತಿ ಹೇಗೋ ಮಾಡಿ ಸರ್ವ ಭಕ್ಷಕ ವರ್ಗದ ಸದಸ್ಯನಾಗಿ ಬಿಟ್ಟರೆ ಅವನ ಬೇಡಿಕೆಗಳನ್ನು ಪೂರೈಸಲು ಕನಿಷ್ಟ ೫-೬ ಮಂದಿ ಯಾದರೂ ಪರಿಸರ ನಿರಾಶ್ರಿತರಾಗಬೇಕಾದ ಸ್ಥಿತಿಯಿದೆ. ನಗರದ ಸರ್ವ ಭಕ್ಷಕ ವರ್ಗಕ್ಕೆ ತಮ್ಮ ಸುತ್ತಲೂ ಇರುವ ಕೊಳಗೇರಿನಿವಾಸಿಗಳು ಪರಿಸರವನ್ನು ಹಾಳು ಮಾಡುತ್ತಿರುವಂತೆ ತೋರುತ್ತಾರೆ. ಸರ್ವಭಕ್ಷಕ ವರ್ಗ ಸ್ವಲ್ಪ ಕಣ್ಣು ತೆರೆದು ನೋಡಿ ದರೆ ಆ ಸ್ಥಿತಿಗೆ ತಾನೇ ಕಾರಣ ಎಂಬುದು ಅರಿವಾಗುತ್ತದೆ. ಅಂತೆಯೇ ಉತ್ತರ ಗೋಲಾರ್ಧದ ಯುರೋಪ್ ಮತ್ತು ಅಮೇರಿಕಾ ದೇಶಗಳಿಗೆ ಭೂಮಿಯ ಪರಿಸರ ಮಾಲಿನ್ಯಕ್ಕೆ ದಕ್ಷಿಣ ಗೋಲಾರ್ಧದ ಏಷ್ಯ, ಆಫ್ರಿಕ ಮತ್ತು ದ. ಅಮೇರಿಕಾದ ರಾಷ್ಟ್ರಗಳು ಕಾರಣವಾಗಿರುವಂತೆ ತೋರುತ್ತವೆ. ಉತ್ತರದ ರಾಷ್ಟ್ರಗಳಿಗೆ ತಮ್ಮ ಸರ್ವ ಭಕ್ಷಕತನ ಕಾರಣವಾಗಿದೆ ಎಂದು ಅನ್ನಿಸುವುದಿಲ್ಲ. ಉದಾಹರಣೆಗೆ ಶೇಕಡ ೫ರಷ್ಟಿರುವ ಅಮೇರಿಕಾ ಸಂಯುಕ್ತ ಸಂಸ್ಥಾನದ ಜನರು ಪ್ರಪಂಚದ ಶೇಕಡಾ ೪೦ ರಷ್ಟು ಶಕ್ತಿಮೂಲಗಳನ್ನು ಬಳಸುತ್ತಿದ್ದಾರೆ. ಅಷ್ಟೇ ಪ್ರಮಾಣದ ತ್ಯಾಜ್ಯಗಳನ್ನು ಉತ್ಪತ್ತಿಮಾಡುತ್ತಿದ್ದಾರೆ. ಆದರೂ ಅವರಿಗೆ ಆಫ್ರಿಕಾದ ಜನ ಹೆಚ್ಚು ಗಲೀಜು ಮಾಡುತ್ತಿರುವಂತೆ ತೋರುತ್ತಿದೆ. ಸರ್ವ ಭಕ್ಷಕ ವರ್ಗಕ್ಕೆ ಸದಾ ಕಾಲವು ತನ್ನ ಹಿತವನ್ನು ಕಾಪಾಡಿಕೊಳ್ಳುವ ಶಕ್ತಿಯಿರುವುದರಿಂದ ಅದರ ಮುಂದೆ ಪರಿಸರಾವಲಂಬಿ ವರ್ಗಕ್ಕಾಗಲೀ, ಪರಿಸರ ನಿರಾಶ್ರಿತ ವರ್ಗಕ್ಕಾಗಲೀ ಏನೂ ಮಾಡಲು ಸಾಧ್ಯವಿಲ್ಲದಿರುವುದರಿಂದ ಪರಿಸರ ಸಂರಕ್ಷಣೆಯ ಕೆಲಸ ಸರ್ವ ಭಕ್ಷಕ ವರ್ಗದ ಕಡೆಯಿಂದಲೇ ಪ್ರಾರಂಭವಾಗಬೇಕೆಂಬ ಮಾತಿನಲ್ಲಿ ಸತ್ಯವಿದೆ. ಒಟ್ಟಿನಲ್ಲಿ ಇಂದು ಒಂದೇ ಪಂಕ್ತಿಯಲ್ಲಿ ಊಟಕ್ಕೆ ಕುಳಿತ ಜನರಲ್ಲಿ ಕೆಲವರಿಗೆ ಭಾರೀ ಭೋಜನ ಊಟವಾದರೆ ಹಲವರಿಗೆ ಕೇವಲ ಸೊಪ್ಪೆಸರಿನ ಊಟ. ಕಡೆಗೆ ಜಾಸ್ತಿ ತಿಂದದ್ದು ಸೊಪ್ಪೆಸರಿನ ನೀವು ಎಂಬ ಮಾತು ಬೇರೆ.

ಪರಿಸರದ ವಿಷಯದಲ್ಲಿ ಬೆಕ್ಕಿನ ಕತ್ತಿಗೆ ಗಂಟೆ ಕಟ್ಟುವ ಕೆಲಸ ನಡೆದೇ ಇದೆ. ಆದರೆ ಅದು ಸಾಧ್ಯವಾಗಿಲ್ಲ. ಬೆಕ್ಕು ತನಗೆ ಸತತವಾಗಿ ಆಹಾರ ಸಿಗಬೇಕೆಂದರೆ ತಾನೂ ಸಹಕರಿಸಿ ಕತ್ತಿಗೆ ಗಂಟೆ ಕಟ್ಟಿಸಿಕೊಳ್ಳಬೇಕಾದ ಅನಿವಾರ್ಯತೆ ಬರುತ್ತಿದೆ. ಪರಿಸರ ಸಂರಕ್ಷಣೆಯ ಕೆಲಸ ಅಂತರರಾಷ್ಟ್ರೀಯ ಮಟ್ಟದಲ್ಲೂ, ವ್ಯಕ್ತಿಗತ ಮಟ್ಟದಲ್ಲೂ ನಡೆಯಬೇಕಾದ ಕ್ರಿಯೆಯಾಗಿದೆ.

ನಮ್ಮ ಜೀವನದ ವಿಧಾನವನ್ನು ಸರಳಗೊಳಿಸಿಕೊಳ್ಳುತ್ತಾ, ಪಾಶ್ಚಾತ್ಯರ ಭೋಗ ಜೀವನವನ್ನೂ ಪ್ರಶ್ನಿಸಬೇಕು. ನಮ್ಮ ವಿದ್ಯುತ್ ಅಗತ್ಯತೆಗಳನ್ನು ಕಡಿಮೆ ಮಾಡುತ್ತಾ ಹೊಸ ಪರಮಾಣು ವಿದ್ಯುತ್ ಸ್ಥಾವರಗಳನ್ನು ವಿರೋಧಿಸಬೇಕು. ನಮ್ಮ ನೀರಿನ ಅಗತ್ಯ ಕಡಿಮೆ ಮಾಡಿಕೊಂಡು ಬೃಹತ್ ಅಣೆಕಟ್ಟುಗಳ ನಿರ್ಮಾಣವನ್ನು ಪ್ರಶ್ನಿಸಬೇಕು. ಅಲ್ಲಿಯ ವರೆಗೂ ಇದು ಕೇವಲ ಒಂದು Match fixing ಪ್ರಹಸನವಾಗಿಯೇ ಉಳಿದಿರುತ್ತದೆ. ★

ಜನಪದ ಸಂಗತಿ ೨ನೇ ಪುಟದಿಂದ

ಈ ರಚನಾತ್ಮಕ ಬೆಳವಣಿಗೆಗಾಗಿ ಮೂರು ತಿಂಗಳಷ್ಟು ದೀರ್ಘವಾದ ಕಾಲಾವಕಾಶವು ಪಾಕಿಸ್ತಾನದ ಆಡಳಿತಾಧಿಕಾರಿಯ ಮುಂದೆ ಮತ್ತು ಭಯೋತ್ಪಾದಕ ಸಂಘಟನೆಗಳ ಮುಂದೆ ಇದೆ. ಭಾರತವು ಕದನ ವಿರಾಮದ ಘೋಷಣೆಯನ್ನು ದುರ್ಬಲ ಮನಸ್ಸಿನಿಂದ ಮಾಡಿರುವುದಿಲ್ಲ. ಕದನವಿರಾಮದ ಪ್ರಯೋಜನ ಶಾಂತಿಸ್ಥಾಪಕರ ಅನುಕೂಲಕ್ಕಾಗಿ ಇದೆಯೇ ವಿನಃ ಹಿಂಸಾಚಾರಿಗಳಿಗಲ್ಲ ಮತ್ತು ಹಿಂಸೆಗೆ ತಕ್ಕ ಶಾಸ್ತಿ ಇದೆ ಹಾಗೂ ತನ್ನ ಸಹನೆಗೂ ಒಂದು ಮಿತಿಯಿದೆ ಎಂಬ ಎಚ್ಚರಿಕೆಯನ್ನು ಭಾರತ ಕೊಟ್ಟಿದೆ. ಒಂದು ವೇಳೆ ಈ ಮೂರು ತಿಂಗಳ ಅವಧಿಯ ಕದನ ವಿರಾಮ ವಿಫಲವಾದಲ್ಲಿ ಕಾಶ್ಮೀರ ಕಣಿವೆ ರಣಾಂಗಣವಾಗುವ ಸಾಧ್ಯತೆ ಬಹಳ ಹೆಚ್ಚಾಗಿರುತ್ತದೆ: ಆಗ ಅದಕ್ಕೆ ಪಾಕಿಸ್ತಾನ ಹೊಣೆಯೇ ಹೊರತು, ಭಾರತವಲ್ಲ.

-ಸು. ಕೌ.

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ.

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ. ಅವುಗಳನ್ನು ಪ್ರಕಟಿಸಲಾಗುವುದು.
ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುಮತಿ ಪಡೆದ ಅನುವಾದಿತ ಕೃತಿಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ವಿಚಾರ ದೀಪ್ತಿ..................

ಪಾಶ್ಚಿಮಾತ್ಯ ಸಾಹಿತ್ಯದಿಂದ ಪ್ರೇರಿತರಾದ ನಾವು ಆ ವಿಚಾರ ಧಾರೆಯನ್ನು ಅಳವಡಿಸಿಕೊಳ್ಳಲು ಹೋಗಿ ದ್ವಂದ್ವದಲ್ಲಿ ಸಿಲುಕಿದ್ದೇವೆ.

ನಿಷೇಧಾತ್ಮಕ ಪ್ರವೃತ್ತಿಯು ಉತ್ತಮ ಸಾಹಿತ್ಯ ನಿರ್ಮಾಣಕ್ಕೆ ಮಾರಕವಾಗಿ ಪರಿಣಮಿಸುತ್ತದೆ.

ನಾವು ನಮ್ಮ ವಿದ್ಯಾಭ್ಯಾಸ ಮತ್ತು ಸಾಹಿತ್ಯವನ್ನು ಪಶ್ಚಿಮದಿಂದ ತಂದಿದ್ದೇವೆ. ಆ ಮೂಲಕ ಅಲ್ಲಿಯ ವಿಚಾರಧಾರೆಯನ್ನು ಪಡೆದ ನಾವು ಅತ್ತಲ್ಲೂ ಇಲ್ಲ, ಇತ್ತಲೂ ಇಲ್ಲದೆ ಎಡಬಿಡಂಗಿಗಳಾಗಿದ್ದೇವೆ. ನಾವು ನಮ್ಮ ಪರಂಪರೆಯನ್ನು ತಿಳಿದುಕೊಳ್ಳುವುದು ಅಗತ್ಯ.

ರಾಜಕೀಯ ವಿಚಾರಗಳೇ ನಮಗೆ ಮಾರ್ಗದರ್ಶಕ ಸೂತ್ರಗಳೆಂದು ಸಾಹಿತಿಗಳು ಭಾವಿಸಬಾರದು. ಸಾಹಿತಿಗಳು ರಾಜಕಾರಣಕ್ಕೆ ಗುರುವಿನ ಸ್ಥಾನದಲ್ಲಿರಬೇಕು, ಸಾಧ್ಯವಾದರೆ ಇನ್ನೂ ಮುಂದೆ ಹೋಗಬೇಕು. ರಾಜಕಾರಣಿಗಳು ಏನಾದರೂ ಹೇಳಿಕೊಳ್ಳಲಿ ಅದಕ್ಕೆ ನಾವು ಕಿವಿಗೊಡಬಾರದು.

– ಎಸ್. ಎಲ್. ಭೈರಪ್ಪ

ಸಂಹಾರಕಾಸ್ತ್ರಗಳು ವಿಶ್ವಸಂಸ್ಥೆಯ ವಶಕ್ಕೆ

– ಸತ್ಯವ್ರತ

(ಶ್ರೀ ಸತ್ಯವ್ರತರು ಕರ್ನಾಟಕದ ಶ್ರೇಷ್ಠ ಚಿಂತಕರಲ್ಲಿ ಒಬ್ಬರು; ಹೋರಾಟಗಾರರಾಗಿ, ಲೇಖಕರಾಗಿ, ಸಂಪಾದಕರಾಗಿ ಅವರು ಪಡೆದಿರುವ ಜೀವನಾನುಭವ ಅಪರೂಪವಾದುದು; ಎಲ್ಲಕ್ಕಿಂತ ಮಿಗಿಲಾಗಿ ಸರಳಜೀವಿ ಹಾಗೂ ತ್ಯಾಗಿ. ಈ ಲೇಖನದಲ್ಲಿ ಅವರ ದೃಷ್ಟಿಕೋನ ಮತ್ತು ವಿಚಾರ ಹೊರಹೊಮ್ಮಿವೆ. - ಸಂ)

ಭೀಷಣತಮ ಶಸ್ತ್ರಗಳ ಶೋಧನೆ, ತಯಾರಿಕೆ, ಸಂಗ್ರಹ ಮತ್ತು ಪ್ರಯೋಗದ ಪ್ರವೃತ್ತಿ ಬೆಳೆಯುತ್ತಾ ಹೋದಂತೆಲ್ಲ ಅವುಗಳ ಮೇಲಿನ ಅಂತಿಮ ನಿರ್ಣಯ ಮತ್ತು ನಿಯಂತ್ರಣ ಯಾರದು, ಹೇಗೆ ಮತ್ತು ಎಷ್ಟು ಮತ್ತು ಅವು ಯಾರ ಕೈಯಲ್ಲಿರಬೇಕು ಇಂಥ ಇನ್ನಿತರ ಪ್ರಶ್ನೆಗಳು ಅತ್ಯಂತ ಪ್ರಾಸಂಗಿಕ ಮತ್ತು ಮಹತ್ವಪೂರ್ಣ ಆಗುತ್ತವೆ. ಈ ಪ್ರಶ್ನೆಗಳಿಗೆ ಸಮಂಜಸ ಉತ್ತರ ಪಡೆಯುವ ಪ್ರಯಾಸವೂ ತೀವ್ರಗೊಳ್ಳುತ್ತಾ ಬಂದಿದೆ. ಶಸ್ತ್ರಶಕ್ತಿಯ ಸಂತುಲನೆಯ ವಿಧಿ–ವಿಧಾನ, ನೀತಿ, ನಿಯಮ – ನಿಷೇಧಗಳೂ ಸಹ ದೇಶಗಳನ್ನು ಸಮಾನ ರೂಪವಾಗಿ ಹಿಂದಿನಿಂದ ಇಂದಿಗೂ ಕಾಡುತ್ತಾ ಬಂದಿರುವ ಜೀವಂತ ಸಮಸ್ಯೆಗಳಾಗಿವೆ.

ಪೂರ್ವಕಾಲದ ಶಸ್ತ್ರಗಳಿಗೂ ಇಂದಿನ ಶಸ್ತ್ರಗಳಿಗೂ ಯಾವ ಹೋಲಿಕೆಯೂ ಇಲ್ಲ. ಅವುಗಳಲ್ಲಿ ಸಂಪೂರ್ಣ ಗುಣಾತ್ಮಕ ಪರಿವರ್ತನೆ ಆಗಿರುವ ಸಂದರ್ಭವನ್ನು ಪರಿಗಣಿಸಿಯೇ ಮೇಲಿನ ಸಮಸ್ಯೆಗಳಿಗೆ ಸಮಾಧಾನ ಕಂಡುಹಿಡಿಯಬೇಕಾಗಿರುವುದರಿಂದ ಇಲ್ಲಿ ಕೆಲವು ಐತಿಹಾಸಿಕ ಸಂಸ್ಮರಣೆಗಳ ಪ್ರಸ್ತಾಪ ಮತ್ತು ಪರಿಶೀಲನೆ ಅಗತ್ಯ. ಹಿರೋಷಿಮಾ, ನಾಗಾಸಾಕಿಗಳಲ್ಲಿ ಸಂಭವಿಸಿದ ಮಹಾ ವಿನಾಶದ ಪರಿಣಾಮವಾಗಿ ಒಂದೆಡೆ ಮಾನವ ಜಾತಿ ತಲ್ಲಣಿಸಿ ಹೋಯಿತು; ಇನ್ನೊಂದೆಡೆ, ಪರಮಾಣು ಶಸ್ತ್ರಗಳ ಸ್ವಭಾವ- ಸ್ವರೂಪಗಳ ಸ್ಪಷ್ಟ ಅರಿವೂ ಆಯಿತು. ವೈಜ್ಞಾನಿಕ ತತ್ವಜ್ಞ ಮ್ಯಾಕ್ಸ್ ಬೋರ್ನ್ ಅವರ ಭಾಷೆಯಲ್ಲಿ ಹೇಳಬೇಕಾದರೆ ಪರಮಾಣು ಶಸ್ತ್ರಗಳನ್ನು ಶಸ್ತ್ರಗಳೆಂದು ಕರೆಯಬೇಕೇ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅವು ಶಸ್ತ್ರಗಳಲ್ಲ, ಅವನ್ನು ಹಾಗೆ ಕರೆಯಲಾಗದು ಎಂದಿದ್ದಾನೆ. ಅವುಗಳ ಈ ಶುದ್ಧ ಸಂಹಾರಕ ಸ್ವರೂಪದ ಅರಿವಿನೊಡನೆಯೇ ಅವನ್ನು ನಿಯಂತ್ರಿಸುವ ಚಿಂತೆ, ಅದಕ್ಕಾಗಿ ರಚಿಸಬೇಕಾದ ತಂತ್ರವನ್ನು ಕುರಿತು ವೈಚಾರಿಕ ತುಮುಲವೂ ಆರಂಭವಾಯಿತು.

ಪರಮಾಣುಶಸ್ತ್ರ ಸಂಪನ್ನ ರಾಷ್ಟ್ರಗಳು ತಮ್ಮ ತಮ್ಮ ನ್ಯೂಕ್ಲಿಯರ್

ಸಿದ್ಧಾಂತಗಳನ್ನು ಘೋಷಿಸಿಕೊಂಡು ಅವುಗಳ ಮೇಲಿನ ಅಂತಿಮ ಹತೋಟಿ, ತತ್ಸಂಬಂಧದ ಅಂತಿಮ ನಿರ್ಣಯವನ್ನು ತಮ್ಮ ತಮ್ಮ ಸರ್ಕಾರಿ ನಾಯಕರ ಕೈಯಲ್ಲಿರಿಸಿವೆ. ಆದರೆ ಆ ರಾಷ್ಟ್ರಗಳ ನಾಯಕತ್ವದ ಗುಣಮಟ್ಟ, ಚರಿತ ಮತ್ತು ಚಿತ್ತಸ್ಥಿತಿ ನಿಜಕ್ಕೂ ಚಿಂತಾಜನಕವಾಗಿರುವಾಗ ಅವರಲ್ಲಿ ನಂಬಿಕೆ ಯಿಡುವುದು, ಅವರ ಕೈಯಲ್ಲಿ ಪರಮಾಣು ಶಸ್ತ್ರಭಂಡಾರವನ್ನಿರಗೊಡುವುದು ಅಪಾಯಕಾರಿ ಕ್ರಮ ಎಂದೇ ತೋರುತ್ತದೆ. ಆದುದರಿಂದ ಈಗ ನ್ಯೂಕ್ಲಿಯರ್ ಶಸ್ತ್ರಾಸ್ತ್ರ ಎಲ್ಲಿ, ಯಾರ ನಿಯಂತ್ರಣದಲ್ಲಿ, ಯಾವ ವಿಧಿ–ವಿಧಾನ ಗೊಳಪಟ್ಟು ಇರಬೇಕೆನ್ನುವುದು ಅತ್ಯಂತ ಮಹತ್ವಪೂರ್ಣ, ಅಷ್ಟೇ ತುರ್ತು ಮತ್ತು ವೈಶ್ವಿಕ ಸ್ವರೂಪದ ಸಮಸ್ಯೆ.

ಶಸ್ತ್ರ ನಿಯಂತ್ರಣದ ಇತಿಹಾಸ :

ನ್ಯೂಕ್ಲಿಯರ್ ಶಸ್ತ್ರಗಳ ನಿಯಂತ್ರಣಕ್ಕಾಗಿ ವಿಶ್ವದ ಪ್ರಯತ್ನ ೧೮೯೯ ರಿಂದಲೇ ಆರಂಭವಾಯಿತೆನ್ನಬೇಕು. ನಿಷೇಧಿಸಲ್ಪಟ್ಟ ಶಸ್ತ್ರಗಳನ್ನು ಪಟ್ಟಿಮಾಡು ವುದು ಮತ್ತು ಲ್ಯಾಂಡ್‌ಮೈನ್ಸ್ ಹರಡುವುದರ ಮೇಲೆ ಪ್ರತಿಬಂಧಕ ಹಾಕುವ ಪ್ರಯಾಸ ೧೮೯೯ ಮತ್ತು ೧೯೦೭ರ ಹೇಗ್ ಸಮಾವೇಶಗಳಲ್ಲಿ ನಡೆಯಿತು. ೧೯೨೫ ರ ಜಿನೀವಾ ಪ್ರೊಟೊಕಲ್ ಶ್ವಾಸಬಂಧಕ ಅನಿಲಗಳ ಮತ್ತು ರೋಗಾಣು ಪ್ರಸರಣ ಯುದ್ಧಗಳನ್ನು ನಿಷೇಧಿಸುತ್ತದೆ. ಅನಂತರ ಅತಿ ಹಾನಿಕಾರಕ ಮತ್ತು ಇನ್ನೂ ಹೆಚ್ಚು ಸ್ವಚ್ಛಂದ ಪರಿಣಾಮಕಾರಿ ಸಾಂಪ್ರದಾಯಿಕ ಶಸ್ತ್ರಗಳ ಮೇಲೆ ಪ್ರಭಾವಕಾರಿ ನಿಷೇಧಗಳನ್ನು ಹೇರಲು ವಿಶ್ವ ೧೯೭೨ ಮತ್ತು ೧೯೮೦ರ ವರೆಗೂ ಕಾಯಬೇಕಾಯಿತು. ಆದರೂ ಅವು ಪೂರ್ಣ ಪ್ರಭಾವಕಾರಿಯಾಯಿತೆಂದು ಮಾತ್ರ ಹೇಳಲಾಗದು. ಈ ಅವಧಿಯಲ್ಲಿ ಕಾಲಕಾಲಕ್ಕೆ ಆದ ನಿಷೇಧ ಒಪ್ಪಂದಗಳ ಮತ್ತು ಅವುಗಳ ಸ್ಥಿತಿ–ಗತಿಯ ಪಟ್ಟಿ ಹೀಗಿದೆ :

೧೯೬೦ : ಪರಿಮಿತ ಪರೀಕ್ಷಾ ಪ್ರತಿಬಂಧಕಗಳ ಒಪ್ಪಂದ ಜಾರಿಗೆ ಬಂತು : ಅದರ ಪ್ರಕಾರ ವಾಯುಮಂಡಲ, ಅಂತರಿಕ್ಷೆ ಮತ್ತು ನೀರಿನೊಳಗೆ ಪರಮಾಣು ಶಸ್ತ್ರ ಪ್ರಯೋಗಗಳ ಮೇಲೆ ನಿಷೇಧ.

೧೯೬೮ : ಪರಮಾಣು ಶಸ್ತ್ರ ಪ್ರಸರಣ ನಿಷೇಧ ಸಂಧಿ : ಪರಮಾಣು ಶಸ್ತ್ರಗಳ ತಂತ್ರಜ್ಞಾನವನ್ನು ಅನ್ಯದೇಶಗಳಿಗೆ ಹಸ್ತಾಂತರಿಸುವುದು, ಅವುಗಳ ಉತ್ಪಾದನೆ, ಈ ಶಸ್ತ್ರ ಸಂಪನ್ನ ದೇಶಗಳಿಂದ ಅನ್ಯದೇಶಗಳಿಗೆ ಕೊಡು ವಿಕೆ, ಅವನ್ನು ಪಡೆಯುವಿಕೆಯ ಮೇಲೆ ನಿಷೇಧ.

ವರ್ಷ ಗೊತ್ತಿಲ್ಲ : ರಾಸಾಯನಿಕ ಶಸ್ತ್ರ ಸಮಾವೇಶ : ಎದುರಾಳಿಯು ಹತಾಶನೂ ಹತಬಲನೂ ಆಗುವಂತೆ ಮಾಡುವ ಶಸ್ತ್ರಗಳನ್ನು ಪರಿಮಿತಗೊಳಿಸುವ ಒಪ್ಪಂದ. ಭಾರತವೂ ಸಹಿಹಾಕಿದೆ.

೧೯೬೯ : ೧೯೭೨ : ಸಾಲ್ಟ್ – ೧ (Strategic Arms Limitation Talks)

೧೯೭೧ : ನ್ಯೂಕ್ಲಿಯರ್ ಅವಗಢಗಳನ್ನು ಕುರಿತ ಒಪ್ಪಂದ :
ಒಪ್ಪಂದ ಜಾರಿಯಲ್ಲಿದೆ.
ನೇರ ಮತ್ತು ತುರ್ತು ಪರಿಸ್ಥಿತಿಯ ಸಂಪರ್ಕ ವ್ಯವಸ್ಥೆಯ ಒಪ್ಪಂದ : ರಷ್ಯಾ ಮತ್ತು ಅಮೆರಿಕಾಗಳ ಮುಖ್ಯಸ್ಥರ ನಡುವೆ ಒಪ್ಪಂದ ಜಾರಿಯಲ್ಲಿದೆ. ಆಕ್ರಮಕ ಪ್ರತಿಪ್ರಕ್ಷೇಪಾಸಗಳನ್ನು ಪರಿಮಿತಗೊಳಿಸುವ ಒಪ್ಪಂದ : ಒಪ್ಪಂದ ಆಯಿತು. ಆದರೆ ಅಮೆರಿಕಾ ಅದನ್ನು ಸ್ಥಿರೀಕರಿಸಲಿಲ್ಲ.

೧೯೮೭ : ವಿನಾಶಕಾರಿ ಮತ್ತು ಎದುರಾಳಿಯನ್ನು ಹತಬಲನನ್ನಾಗಿ ಮಾಡುವ ಶಸ್ತ್ರಗಳ ಸಂಖ್ಯೆಯನ್ನು ಇಳಿಸುವ ಒಪ್ಪಂದ.

೧೯೯೧ : ಮಧ್ಯಮ ದೂರಗಾಮಿ ನ್ಯೂಕ್ಲಿಯರ್ ಪ್ರಕ್ಷೇಪಾಸ್ತ್ರಗಳ ಸಂಖ್ಯೆಯಲ್ಲಿ ಕಡಿತದ ಒಪ್ಪಂದ :

ಶಸ್ತ್ರಾಸ್ತ್ರಗಳ ಸಂಖ್ಯೆಯನ್ನು ಪರಿಮಿತಗೊಳಿಸುವುದು ಆರ್ಥಿಕವಾಗಿ ತೀರ ಆವಶ್ಯಕವೆನಿಸಿತು. ಆ ವೇಳೆಗಾಗಲೆ ಸೋವಿಯತ್ ದೇಶದ ಆರ್ಥಿಕ ಶಕ್ತಿ ಕುಸಿದು, ಆ ದೇಶ ತತ್ತರಿಸಿ ಅಸ್ತವ್ಯಸ್ತವಾಗಿ ಹೋಗುತ್ತಿತ್ತು. ಅತ್ಯಗಾಧ ಒತ್ತಡಗಳಿಗೆ ಸೋವಿಯತ್ ಒಕ್ಕೂಟ ಸಿಕ್ಕಿದ್ದುದೇ ಇದಕ್ಕೆ ಕಾರಣ.

ವಿಶ್ವನ್ಯಾಯಾಲಯ ೧೯೯೬ ರಲ್ಲಿ ಸರ್ವಾನುಮತದ ಹೇಳಿಕೆಯೊಂದನ್ನು ನೀಡಿತು. ಅಂತರರಾಷ್ಟ್ರೀಯ ಮಟ್ಟದ ಸಾಂಪ್ರದಾಯಿಕ ಕಾನೂನು ಪರಮಾಣು ಶಸ್ತ್ರಗಳ ಬಳಕೆಯ ಅಥವಾ ಬಳಕೆಯ ಭೀತಿ ಹುಟ್ಟಿಸುವ ಅಧಿಕಾರವನು ಯಾರಿಗೂ ನೀಡಿಲ್ಲ. ಆದರೂ ಈ ವಿಷಯದಲ್ಲಿ ಸ್ವಲ್ಪ ಅಡೆ–ತಡೆ, ಸಂಯಮದ ನಡವಳಿಕೆ ಎಲ್ಲಿಯಾದರೂ ಕಂಡುಬರುತ್ತಿದ್ದರೆ ಅದಕ್ಕೆ ಮೂಲ ಪ್ರೇರಣೆ ದೊರೆತಿರುವುದು ವಿಶ್ವಸಂಸ್ಥೆಯ ಪ್ರಣಾಳಿಕೆ ಅಥವಾ ಸಂವಿಧಾನದಿಂದಲೇ ಎಂಬುದನ್ನು ಗುರುತಿಸಬಹುದು. "ಪರಮಾಣು ಶಸ್ತ್ರಗಳ ಮೇಲೆ ಇನ್ನಷ್ಟು ಪರಿಣಾಮಕಾರಿ ನಿಷೇಧ – ನಿಯಂತ್ರಣಗಳನ್ನು ಹೇರುವ ಪ್ರಯತ್ನ ನಡೆಯಬೇಕು" ಎಂದು ಅದು ಹೇಳಿತು. ಜೊತೆಗೆ ವಿಶ್ವನ್ಯಾಯಾಲಯದ ಬಹು

ಮತಾಭಿಪ್ರಾಯ ಹೀಗೂ ವ್ಯಕ್ತವಾಯಿತು : "ಇಂದು ಪ್ರಚಲನೆಯಲ್ಲಿರುವ ಅಂತರರಾಷ್ಟ್ರೀಯ ಕಾನೂನು ಪರಮಾಣು ಶಸ್ತ್ರಗಳನ್ನು ಸರ್ವಗ್ರವಾಗಿಯೂ ಮತ್ತು ವೈಶ್ವಿಕವಾಗಿಯೂ ನಿಷೇಧಿಸಿಲ್ಲ. ಪರಸ್ಪರ ವಿಶ್ವಾಸದ ಬಲದ ಮೇಲೆ ಸಂಧಾನ ಮತ್ತು ಮಾತುಕತೆಯ ಮಾರ್ಗವನ್ನನುಸರಿಸಿ ಕಟ್ಟುನಿಟ್ಟಾದ ಮತ್ತು ಪರಿಣಾಮಕಾರಿಯಾದ ಅಂತರರಾಷ್ಟ್ರೀಯ ನಿಯಂತ್ರಗಳು ಜಾರಿಗೆ ಬರುವಂತೆ ಮಾಡುವ ಪ್ರಯತ್ನವಾಗಬೇಕು. ಕಟ್ಟಕೊನೆಯಲ್ಲಿ ಈ ಸಂಧಾನದ ಪ್ರಯತ್ನಗಳು ಸಂಪೂರ್ಣ ನಿಶ್ಶಸ್ತ್ರೀಕರಣದ ಸಾಧನೆಯಲ್ಲಿ ಕೊನೆಗೊಳ್ಳುವಂತಾಗಬೇಕು. ಅಂದರೆ ಅಷ್ಟು ದೃಢವಾದ ಮತ್ತು ಅಷ್ಟೇ ಪರಿಣಾಮಕಾರಿಯಾದ ನಿಯಂತ್ರಣಗಳು ಜಾರಿಗೆ ಬರುವಂತಾಗಬೇಕು" ಎಂದಿತು. ಇದಾದ ನಂತರ ಈ ಕೆಳಗಿನ ಒಪ್ಪಂದ ಆಯಿತು :

೧೯೯೬ – ೯೬ : ಸಮಗ್ರ ಪರಮಾಣುಶಸ್ತ್ರ ಪರೀಕ್ಷಣ ನಿಷೇಧ ಸಂಧಿ :
ಇಂದು ಜಾರಿಯಲ್ಲಿದೆ. ಭಾರತ ಸಹಿ ಹಾಕಲು ಒಪ್ಪಿಲ್ಲ. ಅಮೆರಿಕಾದ ಸೆನೆಟ್ ಇದನ್ನು ದೃಢೀಕರಿಸಲು ನಿರಾಕರಿಸಿತು.

ಪಿ–5 ದೇಶಗಳ ಕಪಟ ಮತ್ತು ಇಬ್ಬಗೆಯ ನೀತಿ :

ಪರಮಾಣು ಶಸ್ತ್ರಾಸ್ತ್ರಗಳ ಮೇಲೆ ನಿಯಂತ್ರಣ ಸಾಧಿಸುವ ಪ್ರಯತ್ನ ಈ ಹಂತ ತಲುಪಿ ಇಲ್ಲಿಯೇ ನಿಂತು ಬಿಟ್ಟಿದೆ. ವಿಶ್ವ ನ್ಯಾಯಾಲಯದ ಅಭಿಪ್ರಾಯದಂತೆ ಕಟ್ಟುನಿಟ್ಟಾದ, ತುಂಬ ಪರಿಣಾಮಕಾರಿಯಾದ ಅಂತರರಾಷ್ಟ್ರೀಯ ನಿಯಂತ್ರಣಗಳು ಯಾವುವು? ವಿಶ್ವಸಂಸ್ಥೆಯ ಪ್ರಣಾಳಿಕೆ ನೀಡುವ ಪ್ರೇರಣೆಗನುಸಾರ ರೂಪಿಸಬಹುದಾದ ನಿಯಂತ್ರಣ ಯಾವುವು ಹಾಗೂ ಸಂಪೂರ್ಣ ನಿಶ್ಶಸ್ತ್ರೀಕರಣಕ್ಕೆ ನೆರವಾಗ ಬಲ್ಲ ನಿಯಂತ್ರಣಗಳು ಎಂಥದಾಗಿರಬೇಕು? ಇವು ಇಂದಿನ ಮಹಾ ಪ್ರಶ್ನೆ. ೧೯೯೬ರಿಂದೀಚೆಗೆ ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಬಹು ಗಂಭೀರ ಬದಲಾವಣೆ, ಬೆಳವಣಿಗೆಗಳಾಗಿವೆ. ಪಿ-5 ದೇಶಗಳ ಗುಂಪಿಗೆ ಭಾರತ – ಪಾಕಿಸ್ತಾನಗಳೂ ಸೇರಿದವು. ಪರಮಾಣು ಶಸ್ತ್ರಗಳು ಹರಡುವ ಭಯ ಹೆಚ್ಚಿತು. ನ್ಯಾಟೋ ಸಿದ್ಧಾಂತ ಹೊರಬಿದ್ದಿತು. ಅದಕ್ಕೆ ಪ್ರತಿಕ್ರಿಯಾರೂಪಿ ಸಿದ್ಧಾಂತಗಳೂ ಘೋಷಿತವಾದವು. ಎನ್.ಪಿ.ಟಿ. ಒಪ್ಪಂದದ ಬಹಿರಂಗ ಉಲ್ಲಂಘನೆಯ ನಿದರ್ಶನಗಳೂ ಹೆಚ್ಚಿವೆ. ಈ ಸಂಧಿಯನ್ನು ಸ್ವಂತ ಅನ್ವಯಿಸಿಕೊಳ್ಳಲಾರದ ಮತ್ತು ತತ್ಸಂಬಂಧದಲ್ಲಿ ಕಪಟನೀತಿಯನ್ನೇ ಅನುಸರಿಸುವ ದೇಶಗಳಿಂದ ಅದರ ಸ್ವಸ್ಥ ಪರಿಪಾಲನೆಯ ಭರವಸೆಯೇನು ಸಿಕ್ಕೀತು? ಈ ಮಾನವ ಸಂಹಾರಕಾಸ್ತ್ರಗಳು ವಿಶ್ವದಲ್ಲಿ ಹರಡದಂತೆ ತಡೆಯುವುದಕ್ಕೆ ಪಿ-5 ದೇಶಗಳು ನೈತಿಕ, ರಾಜಕೀಯ, ಯೌದ್ಧಿಕ ಮತ್ತು ವ್ಯಾವಹಾರಿಕ ದೃಷ್ಟಿ

ಕೋನಗಳಿಂದ ಅಸಮರ್ಥವಾಗಿವೆ. ಇವು ಈ ವಿಷಯಗಳಲ್ಲಿ ಸಾಮೂಹಿಕವಾಗಿ ಅಥವಾ ಒಂಟಿಯಾಗಿ ಲೋಕದ ನಾಯಕತ್ವ ವಹಿಸಲಾರದ ಸ್ಥಿತಿಯಲ್ಲಿವೆ. ಮೇಲಿನ ಘಟನಾವಳಿಯನ್ನೂ, ಈ ಐದು ಶಕ್ತಿಗಳ ವೈಫಲ್ಯ ಸ್ಥಿತಿಯನ್ನೂ ಕುರಿತು ವಿಚಾರ ಮಾಡುವುದಾದರೆ, ನಿಕಟ ಭವಿಷ್ಯದಲ್ಲಿ ಸಂಪೂರ್ಣ ನಿಶ್ಶಸ್ತ್ರೀಕರಣ ಸಾಧ್ಯವಾದೀತೆಂಬ ಅಲ್ಪ – ಸ್ವಲ್ಪ ಆಶೆ – ಭರವಸೆಗಳೂ ನುಚ್ಚುನೂರಾಗಬಲ್ಲವು. ಹೀಗೆ ನಾಯಕತ್ವದ ವೈಫಲ್ಯ – ನೈರಾಶ್ಯ ವಾತಾವರಣದ ನೇರ ಪರಿಣಾಮ ಎರಡು. ಇನ್ನುಳಿದ ದೇಶಗಳೂ ನಿರುಪಾಯವಾಗಿ ತಮ್ಮ – ತಮ್ಮ ಸಂರಕ್ಷಣೆ ಮತ್ತು ಸ್ವಾರ್ಥಹಿತ ಸಾಧನೆಯ ಕಡೆ ಪ್ರಯತ್ನಮಾಡಿಕೊಳ್ಳತೊಡಗುತ್ತವೆ. ಇಂಥ ವಾತಾವರಣ ಪರಮಾಣುಶಸ್ತ್ರ ಪ್ರಸರಣಕ್ಕೆ ನೇರ ಆಹ್ವಾನ. ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಇನ್ನೂ ಹೆಚ್ಚು ದೇಶಗಳು ಈ ಶಸ್ತ್ರ ತಯಾರಿಕೆಗೆ ಇಳಿವರೆ ಏನೂ ಆಶ್ಚರ್ಯಪಡಬೇಕಾಗಿಲ್ಲ. ಎರಡನೆಯದು, ಸಂಪೂರ್ಣ ನಿಶ್ಶಸ್ತ್ರೀಕರಣದ ಸಾಧನೆ ಸ್ವಪ್ನವತ್ ಆಗಿಯೇ ಉಳಿದೀತು.

ವಿಕೃತ ಪರಿಣಾಮ :

ಇಂಥ ಅರಾಜಕ ಸ್ಥಿತಿಯಲ್ಲಿ ಸಹ ಲೋಕದ ಮುಂದಿರುವುದು ಎರಡೇ ಆಶಾಕಿರಣ. ಒಂದನೆಯದು, ವಿಶ್ವಸಂಸ್ಥೆ. ಎರಡನೆಯದು, ೧೫೫–೧೬೭ ಸದಸ್ಯ ರಾಷ್ಟ್ರಗಳ ಒಕ್ಕೊರಲಿನ ತೀವ್ರ ಒತ್ತಾಯ. ಕೊನೆಗೆ ಅವುಗಳ ಸಮ್ಮಿಳಿತ ಕಾರ್ಯಾಚರಣೆ. ಈ ದೇಶಗಳಲ್ಲಿ ಪರಮಾಣಶಸ್ತ್ರ ಸಂಪನ್ನ ದೇಶಗಳ ಸಂಖ್ಯೆ ಬೆರಳೆಣಿಸುವಷ್ಟು. ಉಳಿದ ಭಾರಿ ಬಹುಮತದ ದೇಶಗಳೆಲ್ಲ ಪರಮಾಣ ಶಸ್ತ್ರ ರಹಿತದೇಶಗಳು. ಈ ಭಾರಿ ಬಹುಮತದ ಪ್ರಬಲ ಒತ್ತಡ–ಒತ್ತಾಯದ ಮುಂದೆ ೫–೬ ಪರಮಾಣುಶಸ್ತ್ರ ಸಂಪನ್ನ ರಾಷ್ಟ್ರಗಳ ಬಲ ನಿಲ್ಲಲಾರದು. ಮಾನವ ಸಂಹಾರಕ ಪರಮಾಣುಶಸ್ತ್ರಗಳ ಸಂಪೂರ್ಣ ಪರಿತ್ಯಾಗ, ಸಂಪೂರ್ಣ ನಿಶ್ಶಸ್ತ್ರೀಕರಣಕ್ಕೆ ಬೇಕಾದ ಮನೋಬಲ ಮತ್ತು ನೈತಿಕ ಬಲ ಇವೇ ಎರಡು ಕಡೆಗಳಿಂದ ಮಾತ್ರ ಬರಬಲ್ಲವು. ಇತ್ತೀಚೆಗೆ ಆದುದೂ ಹೀಗೇ. ಇನ್ನು ಮುಂದೆ ಆಗುವುದು ಹೀಗೇ ಸರಿ.

ಭಯ ನಿರಾಧಾರ : ವಿಶ್ವಸಂಸ್ಥೆಯೊಂದ ತಕ್ಷಣ. ಅದು ಅಮೇರಿಕಾ ಮತ್ತು ಅದರ ಅನುಯಾಯಿ ದೇಶಗಳ ಕೈಗೊಂಬೆಯಷ್ಟೇ. ಅದು ಈ ದೇಶಗಳ ಕಿಸೆಯಲ್ಲಷ್ಟೇ ಇದೆ ಎಂಬ ಭಾವನೆ ಬಲವಾಗಿ ಬೇರೂರಿದೆ. ಆದರೆ ವಸ್ತುಸ್ಥಿತಿ ಹಾಗಿಲ್ಲ. ಅನೇಕ ಮಾರ್ಮಿಕ ಸಂಗತಿಗಳ ಮೇಲೆ ಮತ್ತು ಪ್ರಸಂಗಗಳ ಮೇಲೆ ಜನರಲ್ ಅಸೆಂಬ್ಲಿಯಲ್ಲಿ ನಡೆದ ಮತದಾನದ ನಮೂನೆ ನೋಡಿದರೆ ಅಮೇರಿಕಾ ಸೋತಿರುವುದೂ. ಆ ದೇಶದ ಖಾಯಂ ಪ್ರತಿನಿಧಿ

ತನ್ನ ಕೋಪ-ತಾಪ ತೋರಿಸಿ ಹತಾಶ ಮನೋಭಾವ ತೋರಿಸಿರುವ ವಾಸ್ತವಿಕ ಘಟನೆಗಳೇ ಹೆಚ್ಚು. ಜನರಲ್ ಅಸೆಂಬ್ಲಿಯಲ್ಲಿ ಅಮೆರಿಕಾದ ಮಾತು ಎಲ್ಲ ಸಂದರ್ಭಗಳಲ್ಲೂ ನಡೆಯುವುದೆಂಬುದು ನಿಜವಲ್ಲ. ಅದುದರಿಂದ ಮೇಲಿನ ಭಯ ನಿರಾಧಾರ ಮತ್ತು ಇಂಥ ಸಂದರ್ಭಗಳಲ್ಲಿ ಅಮೆರಿಕಾವನ್ನು ಎದುರಿಸಿ ನಿಲ್ಲಲೇಬೇಕಾದಾಗ ಉಳಿದ ದೇಶಗಳು ಅದಕ್ಕೆ ಹಿಂಜರಿಯುವುದೆಂಬ ಭರವಸೆ ಹೆಚ್ಚಿದೆಯೇ ಹೊರತು ಕಡಿಮೆಯಾಗಿಲ್ಲ. ಇತ್ತೀಚೆಗೆ ನಡೆದ ಅತ್ಯಂತ ಮಹತ್ವ ಪೂರ್ಣ ಘಟನೆಗಳು ಈ ಆಶೆಯನ್ನು ಬಲಪಡಿಸಿವೆ.

ಇತ್ತೀಚಿನ ಬೆಳವಣಿಗೆಗಳು : ಇಪ್ಪತ್ತನೇ ಶತಮಾನದ ಕೊನೆಯ ಶೃಂಗ ಮಹಾಸಭೆಯ ಅಧಿವೇಶನ ಕಳೆದ ಸೆಪ್ಟಂಬರ್ 8 ನೇ ತಾರೀಖು ಮುಗಿದು ವಿಶ್ವದ ೧೫೦ ಕ್ಕೂ ಹೆಚ್ಚು ಸದಸ್ಯ ರಾಷ್ಟ್ರಗಳು ನಾಯಕರು ಅಂಗೀಕರಿಸಿದ ಘೋಷಣಾ ಪತ್ರದಲ್ಲಿ ವಿಶ್ವ ಸಂಸ್ಥೆ ಮತ್ತು ಅದರ ಛಾರ್ಟರ್ ಮೇಲಿನ ತಮ್ಮ ನಂಬಿಕೆಯನ್ನು ಮತ್ತೊಮ್ಮೆ ದೃಢೀಕರಿಸಿದಾರೆ. ಇನ್ನೂ ಹೆಚ್ಚು ಶಾಂತಿ ಯುತ, ಸಮೃದ್ಧ ಮತ್ತು ನ್ಯಾಯಸಮ್ಮತ ವಿಶ್ವವ್ಯವಸ್ಥೆಗೆ ಇವೇ ಅನಿವಾರ್ಯ ಬುನಾದಿ ಎಂದು ಸರ್ವಸಮ್ಮತಿಯಿಂದ ಸಾರಿದ್ದಾರೆ. ಅದರಲ್ಲಿ ತಾವೆಲ್ಲ ಸಹಜ ಚಿಂತನೆಯ ಫಲವಾಗಿ ಒಪ್ಪಿಕೊಂಡ ಸಾಮಾನ್ಯ ಜೀವನ ಮೌಲ್ಯಗಳೂ ಮತ್ತು ಮತ್ತು ಅವನ್ನು ಪ್ರಕಟಗೊಳಿಸುವ ಆರ್ಥಿಕ, ರಾಜಕೀಯ, ಸಾಮಾಜಿಕ ಉದ್ದೇಶಗಳನ್ನು ಪಟ್ಟಿ ಮಾಡಿ ಅದರಲ್ಲಿ ನಿಶ್ಶಸ್ತ್ರೀಕರಣವನ್ನೂ ಸೇರಿಸಿದಾರೆ. ಇದೇನು ಕಡಿಮೆ ಬೆಳವಣಿಗೆಯೇ ? ನಾಯಕರು ಸಂಹಾರಕ ಶಸ್ತ್ರಗಳ ಪರಿ ತ್ಯಾಗಕ್ಕೆ, ಮುಖ್ಯವಾಗಿ, ಪರಮಾಣು ಶಸ್ತ್ರಗಳ ವಿಸರ್ಜನೆಗೆ ಇರುವ ಎಲ್ಲ ಐಚ್ಛಿಕ ಮಾರ್ಗಗಳನ್ನು ತೆರೆದಿಡುವ ಮತ್ತು ಸೂಕ್ತ ಕಾಲದಲ್ಲಿ ಅವನ್ನು ಬಳಸುವ ವಿಧಾನವನ್ನು ಗೊತ್ತುಮಾಡಲು ಒಪ್ಪಿದರು. ಕೊನೆಗೆ ವಿಶ್ವಸಂಸ್ಥೆಯೇ ಇಡೀ ಮಾನವ ಪರಿವಾರಕ್ಕಿರುವ ಸಾಮಾನ್ಯ ಗೃಹ. ಮೇಲಣ ಉದ್ದೇಶ್ಯಗಳ ಪೂರೈಕೆಗೆ ಇದರ ಮೂಲವೇ ನಾವು ಕಾರ್ಯ ಮಾಡುತ್ತೇವೆ ಎಂದು ದೃಢ ವಾಗಿ ಹೇಳಿದರು.

ಇದಕ್ಕೆ ಮೊದಲು ಪರಮಾಣು ಶಸ್ತ್ರ ಸಂಪನ್ನ ಬೃಹತ್ ರಾಷ್ಟ್ರಗಳು ಮೇ 20 ನೇ ಶನಿವಾರ ಒಂದು ತಿಂಗಳ ದೀರ್ಘ ಕಾಲದ ಸಂಧಾನಾನಂತರ ತಮ್ಮ ಪರಮಾಣು ಶಸ್ತ್ರಗಳನ್ನು ಪರಿತ್ಯಜಿಸುವ ಒಂದು ಒಪ್ಪಂದವನ್ನು ಸ್ವೀಕರಿ ಸಿದರು. ಈ ಒಪ್ಪಂದಕ್ಕೆ ತಾವು ಪ್ರತಿಬದ್ಧರಾಗಿರುವುದಾಗಿ ಅಸಂದಿಗ್ಧ ಮಾತು ಗಳಲ್ಲಿ ತಿಳಿಸಿ, ವಚನ ನೀಡುತ್ತಾ ಜಗತ್ತು ಪರಮಾಣು ಯುದ್ಧಕ್ಕೆ ಪಳೆಯು ಲ್ಪಡುವುದನ್ನು ತಪ್ಪಿಸಲು ಈ ಕ್ರಮ ಅತ್ಯವಶ್ಯಕವೆಂದು ಸಾರಿದರು. ಪರಮಾಣು

ಶಸ್ತ್ರ ಸಂಪನ್ನ ದೇಶಗಳು ನಿಶ್ಶಸ್ತ್ರೀಕರಣದತ್ತವೂ ಉಳಿದೆಲ್ಲ ಶಸ್ತ್ರ ರಹಿತ ರಾಷ್ಟ್ರಗಳು ಆ ಶಸ್ತ್ರವನ್ನು ಎಂದೆಂದಿಗೂ ಹೊಂದದಿರುವ ಸಂಕಲ್ಪವನ್ನೂ ತೆಗೆದುಕೊಳ್ಳವೇ ವಚನ ಇತ್ತರು. (ಇದೇ ಸಂದರ್ಭದಲ್ಲಿ 30-32 ವರ್ಷಗಳ ಹಳೆಯ ಪರಮಾಣು ಶಸ್ತ್ರ ಪ್ರಸರಣ ನಿಷೇಧ ಸಂಧಿ (ಎನ್.ಪಿ.ಟಿ. ಒಪ್ಪಂದ) ಯನ್ನು ಪುನರವಲೋಕಿಸಿ ಒಪ್ಪಿಕೊಳ್ಳಲಾಯಿತು.) ಪರಮಾಣು ಶಸ್ತ್ರವಿಹೀನ ರಾಷ್ಟ್ರಗಳು ಅಮೆರಿಕಾ - ರಷ್ಯಾಗಳೆಡರನ್ನೂ ಕಳೆದ ಐದು ವರ್ಷಗಳಿಂದ ನಿಶ್ಶಸ್ತ್ರೀಕರಣದ ಗುರಿಯತ್ತ ಬಹುಮಂದಗತಿಯಿಂದ ಸಾಗುತ್ತಿರುವುದನ್ನು ಕಟುವಾಗಿ ಟೀಕಿಸಿದ್ದರ ಫಲವಾಗಿ ಈ ಐದು ದೇಶಗಳು ಮೇ ೮ನೇ ತಾರೀಖು ಹೇಳಿಕೆಯೊಂದನ್ನು ಹೊರಡಿಸಿ ಪರಮಾಣು ಶಸ್ತ್ರಗಳನ್ನು ತ್ಯಜಿಸಿ ಸಂಪೂರ್ಣ ನಿಶ್ಶಸ್ತ್ರೀಕರಣದ ಗುರಿಯತ್ತ ತ್ವರಿತಗತಿಯಿಂದ ಸಾಗಲು ನಿಸ್ಸಂದಿಗ್ಧವಷ್ಟೇ ಅಲ್ಲ, ಅನಿವಾರ್ಯ ಹೊಣೆಗಾರಿಕೆಯನ್ನು ಪೂರೈಸುವ ವಚನ ನೀಡುವುದಾಗಿ ಹೇಳಿದವು. ಈ ನಿಮಿತ್ತ ವಚನ ಪಡೆಯಲೂ ಸಹ ಅಮೇರಿಕಾ-ಇರಾಕ್ ನಡುವಣ ಮತಭೇದದ ಪರಿಹಾರಕ್ಕೂ ಸದಸ್ಯ ರಾಷ್ಟ್ರಗಳ ಭಾರಿ ಒತ್ತಾಯ ಬೇಕಾಯಿತು, ಘೋಷಣೆಗೆ ಭಾರತ, ಪಾಕಿಸ್ಥಾನ, ಕ್ಯೂಬಾ ಮತ್ತು ಇಸ್ರೇಲ್ ಈ ನಾಲ್ಕು ದೇಶಗಳನ್ನು ಬಿಟ್ಟು ೧೮೭ ರಾಷ್ಟ್ರಗಳು ಸಹಿ ಹಾಕಿವೆ. ಇಷ್ಟೆಲ್ಲಾ ಆದಮೇಲೂ ಈ ಐದು ಶಕ್ತಿ ಸಂಪನ್ನ ದೇಶಗಳು ನಿಶ್ಶಸ್ತ್ರೀಕರಣ ಸಾಧನೆಗೆ ಒಂದು ಕಾಲ ಮರ್ಯಾದೆ ಅಥವಾ ವೇಳಾಪಟ್ಟಿ, ಅಥವಾ ಗುರಿಸಾಧನೆಗಾಗಿ ಗೊತ್ತಾದ ಮತ್ತು ಮಾರ್ಗಾನುಸರಣೆಯನ್ನೇ ಆಗಲೀ ಗೊತ್ತುಮಾಡದೆ ಒಟ್ಟುಬಿಟ್ಟರು.

ವಿನೂತನ ಕ್ರಾಂತಿಕಾರಿ ಸಲಹೆ : ಇಂಥ ಸಂದರ್ಭ ಮತ್ತು ಸನ್ನಿವೇಶದಲ್ಲಿ ಅಂತಿಮ ಗುರಿಯತ್ತ ಸಾಗಲು ಒಂದು ಮಧ್ಯಸ್ಥ ಮಾರ್ಗಾವಲಂಬ, ನಡುನಿಲುವು ಎನ್ನಿ ಅಥವಾ ಸಂಧಿಸ್ಥಾನದ ವಿಶ್ವಸಂಸ್ಥೆಯ ಪ್ರೇರಣೆ ಉದ್ದೇಶ ಮತ್ತು ವಿಶ್ವಕೋರ್ಟ್‌ನ ಆಶಯಕ್ಕನುರೂಪದ ಕ್ರಮ ಹೀಗಿರಬೇಕಾಗುತ್ತದೆ. **ಸಮಸ್ತ ಪರಮಾಣು, ಜೈವಿಕ ಮತ್ತು ರಾಸಾಯನಿಕ ಶಸ್ತ್ರಗಳು ವಿಶ್ವ ಸಂಸ್ಥೆಯ ವಶದಲ್ಲಿ ಮತ್ತು ಆದರ ಅಂತಿಮ ನಿರ್ಣಯ ನಿಯಂತ್ರಣಕ್ಕೆ ಒಳಪಟ್ಟು ಇರಬೇಕು.** ಈ ಕಟ್ಟುಪಾಡು ಸದ್ಯದ ಶಕ್ತಿ-ಸಂಪನ್ನ, ಶಸ್ತ್ರರಹಿತ, ಶಸ್ತ್ರಾಕಾಂಕ್ಷಿ ಮತ್ತು ಕಟಿಬದ್ಧ ಶಸ್ತ್ರವಿರೋಧಿ ಮತ್ತು ಮುಂತಾದ ಎಲ್ಲಾ ರಾಷ್ಟ್ರಗಳಿಗೂ ಸೂಕ್ತವಾಗಿ ಅನ್ವಯವಾಗಬೇಕು. ಅನಂತರ ಯಾವ ಸದಸ್ಯ ರಾಷ್ಟ್ರವೂ ಶಸ್ತ್ರ ಪರೀಕ್ಷೆ, ಉತ್ಪಾದನೆ, ಶೇಖರಣೆ, ಬಳಕೆ, ಪ್ರಯೋಗ ಆ ಸಂಬಂಧದ ತಂತ್ರಜ್ಞಾನ ಹಸ್ತಾಂತರಣ ಮುಂತಾದ ಎಲ್ಲ ಚಟುವಟಿಕೆಗಳ ಮೇಲೆ ಪೂರ್ಣ ಪ್ರತಿಬಂಧನ ಜಾರಿಗೆ ಬರಬೇಕು. ಈ ಪ್ರತಿಬಂಧಕಾದೇಶ,

ಅಂತರ ವಿಧಿ- ನಿಷೇಧಗಳ ಪಾಲನೆ ಉಲ್ಲಂಘನೆಗೆ ಸಂಬಂಧಿಸಿದ ಅಂತಿಮ ಅಧಿಕಾರ-ತೀರ್ಪು ವಿಶ್ವಸಂಸ್ಥೆಯದಾಗಿರಬೇಕು.

ವಿಶ್ವಸಂಸ್ಥೆ ಮೇಲೆ ಹೇಳಿದ ಗುರುತರ ಜವಾಬ್ದಾರಿಗಳನ್ನು ನಿರ್ವಹಿಸಲನುವಾಗುವಂತೆ, ಸಶಕ್ತ ಮತ್ತು ಸಮರ್ಥ ವಿಶ್ವಸರ್ಕಾರದಂತೆ ರೂಪಾಂತರಗೊಳ್ಳಬೇಕು. ಭದ್ರತಾ ಸಮಿತಿ ಭೌಗೋಳಿಕ. ಜನಸಂಖ್ಯಾವಾರು ಅಧಿಕಾಧಿಕ ಬೆಂಬಲ ನೀಡುವ ದೇಶಗಳನ್ನು ಕೂಡಿಸಿಕೊಂಡು ವಿಸ್ತರಿಸಲ್ಪಡಬೇಕು. ಐದು ಮಹಾರಾಷ್ಟ್ರಗಳಿಗಿರುವ ವೀಟೋ ಅಧಿಕಾರ ರದ್ದಾಗಿ ಹೊಸ ಭದ್ರತಾ ಸಮಿತಿ ಜನರಲ್ ಅಸೆಂಬ್ಲಿ ಅರ್ಥಾತ್ ವಿಶ್ವಸಭೆ ಅಂದರೆ ವಿಶ್ವಪಾರ್ಲಿಮೆಂಟಿನ ಏಕೈಕ ಕಾರ್ಯಕಾರಿ ಮಂಡಲವಾಗಿ ಮಾರ್ಪಟ್ಟು ಕಾರ್ಯ ನಿರ್ವಹಿಸಬೇಕು. ಜನರಲ್ ಅಸೆಂಬ್ಲಿ ಸರ್ವೋಚ್ಚ ನೀತಿ ನಿರ್ಧಾರಕ, ಅಂತಿಮ ಸಾರ್ವಭೌಮಾಧಿಕಾರ ಸಂಪನ್ನ ವಿಶ್ವರಾಜ್ಯದ ಸರ್ಕಾರಿ ಸಂಸ್ಥೆಯಾಗಿ ಪರಿವರ್ತಿಸಲ್ಪಡಬೇಕು. ಇವೆಲ್ಲ ಅತಿಗಂಭೀರ, ಕ್ರಾಂತಿಕಾರಿ ಪರಿವರ್ತನೆ-ಸುಧಾರಣೆಗಳು ಸಾಧ್ಯವಾಗುವಂತೆ ಸಮಸ್ತ ಸದಸ್ಯ ರಾಷ್ಟ್ರಗಳು ತಮ್ಮ ಸಾರ್ವಭೌಮಾಧಿಕಾರದ ಕೆಲವಂಶಗಳನ್ನು ವಿಶ್ವಸಂಸ್ಥೆಗೆ ಬಿಟ್ಟುಕೊಡಬೇಕು. ಜನರಲ್ ಅಸೆಂಬ್ಲಿ ವಿಶ್ವ ಸರ್ಕಾರದ ವಿಶ್ವ ಸಭೆ ಮತ್ತು ಭದ್ರತಾ ಮಂಡಲ ಅದರ ಮಂತ್ರಿ ಮಂಡಲದಂತೆ ವಿಕಸಿಸಬೇಕು. ಇಷ್ಟೇ ಅಲ್ಲ, ರಾಷ್ಟ್ರೀಯ ಸರ್ಕಾರಗಳು ತಮ್ಮ ತಮ್ಮ ಸೈನಿಕ ಬಲದ ಒಂದಂಶವನ್ನು ವಿಶ್ವಸಂಸ್ಥೆಯ ಸ್ಥಾಯಿ ಶಾಂತಿಸ್ಥಾಪಕ ದಳಕ್ಕೆ ಕಳುಹಿಸಲೂ ಸಮ್ಮತಿಸಬೇಕು. ಗಾಂಧೀಜಿ ಇಂಥನೇ ಸಲಹೆ ನೀಡಿದ್ದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಭವಿಷ್ಯತ್ ವಿಶ್ವದಲ್ಲಿ ಸ್ಥಾಯಿ ಸಂರಕ್ಷಣೆ ಮತ್ತು ಸಂನಿಯೋಜಿತ ಪ್ರಗತಿ ಸಾಧನೆಯ ಆಕಾಂಕ್ಷೆಯೇ ಸ್ವತಂತ್ರ ರಾಷ್ಟ್ರಗಳೆಲ್ಲ ಕೂಡಿ ಶೋಷಣರಹಿತತೆ ಮತ್ತು ತಮ್ಮ ಸ್ವಾತಂತ್ರ್ಯ ರಕ್ಷಣೆಯ ಸ್ಥಿರ ಭರವಸೆಯ ಆಧಾರದ ಮೇಲೆ ಸಂಯುಕ್ತ ವಿಶ್ವ ಸರ್ಕಾರದ ರಚನೆಗೆ ಒತ್ತಾಯ ತರಬಲ್ಲವು. ಹೀಗೆ ವಿಶ್ವ ಸರ್ಕಾರ ಸ್ಥಾಪನೆಯಾದ ಮೇಲೆ ಎಲ್ಲ ಸ್ವತಂತ್ರ ರಾಷ್ಟ್ರಗಳು ನಿಶ್ಶಸ್ತ್ರೀಕರಣವನ್ನು ಪಾಲಿಸುವವು.... (ಸಧ್ಯದಲ್ಲಿ) ಅಹಿಂಸೆಯಲ್ಲಿ ವಿಶ್ವದ ನಂಬಿಕೆ ಕುದುರದಿರುವರೆಗೆ ಒಂದು ವಿಶ್ವ ಪೋಲೀಸ್ ಅದು ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಕಾರ್ಯವನ್ನು ನಿರ್ವಹಿಸುತ್ತಿರಬಹುದು. ಇದು ತಾವು ತೋರಬಹುದಾದ ಹೊಂದಾಣಿಕೆಯ ಪರಿಮಿತಿ – ಬಿಂದು' ಎಂದು ಗಾಂಧೀಜಿ ಹೇಳಿದ್ದರು – (ಲಾಸ್ಟ್‌ಫೇಸ್ : ಸಂಪುಟ ೧ : ಅಧ್ಯಾಯ ೫ : ಪ್ರಸರಣ ೪ : ಪುಟ ೧೨೦-೧೨೨).

೨೧ ನೇ ಪುಟನೋಡಿ

ಮಾ ತಿ ನ ಉ ಪ ಟ ಳ

– ಆಚಾರ್ಯ ಕೃಪಲಾನಿ

(ಶಿಕ್ಷಣ ಕ್ಷೇತ್ರ ಎಂದಿನಿಂದಲೂ ವಿಮರ್ಶೆಗೆ ಒಳಗಾಗುತ್ತ ಬಂದಿರುವಂಥದು. ಶಿಕ್ಷಣವು ಅನ್ನ ಕಾಯಕದ ಸುತ್ತ ಇರಬೇಕೆಂಬ ಗಾಂಧೀಜಿಯವರ ವಿಚಾರದ ಬೆಳವಣಿಗೆಯನ್ನು ಕೃಪಲಾನಿಯವರು ಇಲ್ಲಿ ದಾಖಲಿಸಿದ್ದಾರೆ. ಗುರಿ ಮತ್ತು ಗುರು ಇಲ್ಲದ ಇಂದಿನ ಶಿಕ್ಷಣ ಪದ್ಧತಿಯ ವಿರುದ್ಧವಾಗಿ ಅನ್ನಕಾಯಕದ ಶಿಕ್ಷಣವು ಇಂದಿಗೂ ಪ್ರಸ್ತುತವಾಗಿದೆಯೆಂಬುದು ೬೨ ವರ್ಷಗಳ ಹಿಂದೆ ೧೯೩೮ ರಲ್ಲಿ ಗಾಂಧೀಜಿ ಹೇಳಿದ್ದರೆಂಬುದು ಆ ವಿಚಾರದ ಆಕರ್ಷಣೆ. ಇಲ್ಲಿ ಆ ವಿಚಾರಗಳನ್ನು ಕ್ರಮಶಃ ಕೊಡಲಾಗುತ್ತಿದೆ. ಇದು ಏಳನೆಯ ಕಂತು. -ಸಂ)

ಕೈಗಾರಿಕೆಯೊಂದರ ಸುತ್ತಲೂ ಹೆಣೆದುಕೊಂಡ ವಾಸ್ತವ ಶಿಕ್ಷಣದಲ್ಲಿ ಬರೀ ಶಾಬ್ದಿಕ ತಾತ್ವಿಕ ಶಿಕ್ಷಣಕ್ಕಿಂತ ಇನ್ನೂ ಒಂದು ಹೆಚ್ಚಿನ ಲಾಭವಿದೆ. ಶಬ್ದ ಸಾಮ್ರಾಜ್ಯದ ಪೀಡೆಯಿಂದ ಮಕ್ಕಳನ್ನು ಇದು ಪಾರು ಮಾಡುತ್ತದೆ. ಕೆಲಸಗಾರ ಬಳಸುವ ಒಂದೊಂದು ಮಾತೂ ಒಂದೊಂದು ನಿಜವಾದ ವಸ್ತುವಿನ ಸಂಕೇತ. ಹೊರಗಿನ ಲೋಕದಲ್ಲಿ ಅದರ ಮೂಲವಸ್ತು ಇದ್ದೇ ಇದೆ. ಯಾವುದಾದರೂ ಶಬ್ದಕ್ಕೆ ಸ್ಪಷ್ಟ ನಿರ್ದಿಷ್ಟ ಲಕ್ಷ್ಯವಿಲ್ಲದಿದ್ದರೆ ಕೆಲಸಗಾರನಿಗೆ ನ್ಯಾಯವಾಗಿಯೇ ಅದರ ಬಗ್ಗೆ ಸಂದೇಹ. ಮಾತು ಬರೀ ಸಂಕೇತ ಎಂಬುದು ಅವನಿಗೆ ಗೊತ್ತು. ಅವಕ್ಕೆ ತಮ್ಮದೇ ಅಸ್ತಿತ್ವವಿಲ್ಲ. ಈ ವಸ್ತು, ಈ ಸಂಬಂಧ, ಈ ಕ್ರಮವನ್ನು ಕುರಿತದ್ದು ಈ ಮಾತು ಎಂದರೆ ಆ ಮಾತಿಗೆ ಒಂದು ಅರ್ಥ, ಒಂದು ಬೆಲೆ ಉಂಟು. ಆಡಿದ ಮಾತಿಗೆ ಒಂದು ವಸ್ತು, ಒಂದು ಸಂಬಂಧ ಹೊರಗಿನ ಲೋಕದಲ್ಲಿ ಇರದಿದ್ದರೆ, ಇದ್ದರೂ ಅನಿರ್ದಿಷ್ಟವಾಗಿ ಅಸ್ಪಷ್ಟವಾಗಿ ಇದ್ದರೆ, ಇಂಥ ಮಾತಿನ ಅಭ್ಯಾಸದಿಂದ ಬಂದ ಜ್ಞಾನಕ್ಕೆ ಎಷ್ಟು ಬೆಲೆ ಕೊಡಬೇಕೋ ಅವನು ಬಲ್ಲ. ನಿಜವಾದ ವಸ್ತುಗಳನ್ನು ಕೈಯ್ಯಾರ ಉಪಯೋಗಿಸಿ ಅವುಗಳ ಸಂಬಂಧವನ್ನು ಅರಿತು, ಯಾವ ಮಾತು ಹೇಗೆ ಹುಟ್ಟಿತೋ, ಅದಕ್ಕೆ ಆ ಅರ್ಥ ಹೇಗೆ ರೂಢಿಯಾಯಿತೋ, ಆ ಮಾತಿನಿಂದ ಏನು ಪ್ರಯೋಜನವೋ ಎಲ್ಲವನ್ನೂ ತಿಳಿದುಕೊಳ್ಳುತ್ತಾನೆ. ಅದರ ಇತಿಮಿತಿಯೂ ಗೊತ್ತು.

ಮಾತಿನ ಸಾಂಕೇತಿಕ ಗುಣದ ಅಪಾರ್ಥ ಅದರ ದುರುಪಯೋಗ, ಅಪಪ್ರಯೋಗಗಳ ದೆಸೆಯಿಂದ. ಜಗತ್ತಿನಲ್ಲಿ ಕೊನೆಯಿಲ್ಲದ ಜಗಳ, ಘರ್ಷಣೆ ತಲೆಯೆತ್ತಿವೆ. ನಿಜವಾದ ಸಂಗತಿಯೇನೆಂದು ಪರಿಶೀಲಿಸಿದರೆ ಈ ವಿವಾದವೆಲ್ಲ ತಣ್ಣಗಾಗುತ್ತದೆ. ಆದರೆ ತಾತ್ವಿಕ ಕಾಲ್ಪನಿಕ ಜ್ಞಾನದ ಪ್ರಭಾವ ಜನರ ಬುದ್ಧಿಯ

ಮೇಲೆ ಮುಂತುಬೂದಿ ಚೆಲ್ಲಿ ಕೇವಲ ಮಾತಿಗಾಗಿ ಜನ ಒಬ್ಬರ ಕತ್ತನ್ನು ಒಬ್ಬರು ಹಿಸಕಲು ಸಿದ್ಧವಾಗುವಂತೆ ಮಾಡುತ್ತದೆ. ಸರಿಯಾದ ಅರ್ಥಜ್ಞಾನವಿಲ್ಲದ, ಅಶುದ್ಧ ಶಬ್ದಪ್ರಯೋಗದಿಂದ ನಡೆದಷ್ಟು ಯುದ್ಧ ರಕ್ತಪಾತ ಮತ್ಯಾವುದರಿಂದಲೂ ನಡೆದಿಲ್ಲ. ಈ ಶಬ್ದಗಳ ಜಾಲದಿಂದ ವಿಜ್ಞಾನಿಗಳೂ ಮುಕ್ತರಲ್ಲ. ಅತಿ ಜಾಗರೂಕತೆಯಿಂದ ಪರಿಶೋಧಿಸಿದ ಜ್ಞಾನವನ್ನು ಕೊಡಬೇಕು ವಿಜ್ಞಾನ. ಆದರೆ ಅನೇಕ ಸಲ ಜಿಜ್ಞಾಸೆಗೆ ಆಧಾರವಾಗಿಟ್ಟುಕೊಂಡ ಪೂರ್ವಪಕ್ಷದ ಕಲ್ಪನೆಯನ್ನು ಪ್ರಯೋಗ ಸಿದ್ಧ ಸತ್ಯವೆಂದು ಭಾವಿಸಿ ಜಗತ್ತಿನ ನಿತ್ಯಜೀವನದ ವ್ಯವಹಾರಕ್ಕೆ ಅದನ್ನು ಅನ್ವಯಿಸುತ್ತಾರೆ. ಉದಾಹರಣೆಗೆ ಭೌತವಾದ ಅಥವಾ ಲೋಕಾಯುತವಾದ ಒಂದು ತತ್ವ. ವೈಜ್ಞಾನಿಕವಾದ ವಿಮರ್ಶೆಯಿಂದ ಸಿದ್ಧವಾದ ಅಂಶವಲ್ಲ. ವಿಜ್ಞಾನದಲ್ಲಿ ಅದೊಂದು ಬರೀ ಪೂರ್ವಪಕ್ಷ: ವಿವೇಕಿಗಳು, ಪ್ರಾಮಾಣಿಕರು ಒಪ್ಪುವಂತೆ ಅದನ್ನು ಒಂದು ವೈಜ್ಞಾನಿಕ ಸೂತ್ರವಾಗಿ ಪರಿಶೀಲಿಸಲು ಸಾಧ್ಯವೆಂಬುದೇ ಆಶ್ಚರ್ಯ. ಆದರೂ ತತ್ವಶಾಸ್ತ್ರಿಗಳು, ಅರ್ಥಶಾಸ್ತ್ರಿಗಳು, ಕಾರ್ಯನಿರತ ಸುಧಾರಕರು, ರಾಜಕಾರಣಿಗಳು ಈ ಪೂರ್ವಪಕ್ಷದ ಕಲ್ಪನೆಯನ್ನೆ ವಿಜ್ಞಾನಸಿದ್ಧ ವಿಷಯವೆಂದು ಅದರ ಆಧಾರದ ಮೇಲೆ ತಮ್ಮ ವ್ಯಾವಹಾರ ಕಾರ್ಯಕ್ರಮಗಳನ್ನು ರಚಿಸುತ್ತಾರೆ. ಒಂದು ತಲೆಮಾರಿನ ಕೆಳಗೆ ಯಾಂತ್ರಿಕ ಭೌತವಾದವೇ ಕೊನೆ ಮಾತಾಗಿತ್ತು. ಈಗ ತಾರ್ಕಿಕ ಭೌತವಾದ. ಎರಡೂ ವಿಜ್ಞಾನಿಗಳ ಕೆಲಸಕ್ಕೆ ಅನುಕೂಲಿಸಲು ಮಾಡಿದ ಪೂರ್ವಪಕ್ಷ, ಬರೀ ಕಲ್ಪನೆ. ಆದರೆ ಅವನ್ನೇ ವಿಜ್ಞಾನ ಸಿದ್ಧ ವಿಷಯಗಳೆಂದು ಗ್ರಹಿಸಿದಾರೆ.

ಈ ಶಬ್ದಪೀಡೆಯ ಬಗ್ಗೆ ಪೆಸ್ಟಲಾಜಿ ಹೀಗೆ ಹೇಳಿದಾನೆ: "ಜೀವನದ ವಾಸ್ತವ ಸ್ವರೂಪದ ಜ್ಞಾನವಿಲ್ಲದೆ ಬರೀ ಶಬ್ದ, ಪದಜಾಲ, ಅಭಿಪ್ರಾಯಗಳ ಚಕ್ರವ್ಯೂಹದೊಳಕ್ಕೆ ನುಗ್ಗಿದರೆ, ಜನರ ಮನಸ್ಸು ಬೆಳೆಯಲು ಈ ಶಬ್ದ ಪ್ರಪಂಚವೊಂದೇ ಆಧಾರವಾಗಿಬಿಡುತ್ತದೆ. ಬೇರೆ ಯಾವ ಬಲವೂ ಇಲ್ಲವಾಗುತ್ತದೆ." ಮತ್ತೊಂದು ಕಡೆ, ಯುರೋಪಿನಲ್ಲಿ ಜನರ ಸಂಸ್ಕೃತಿ ಬೊಗಳೆಯಾಗಿದೆ. ಶ್ರದ್ಧಾ ಭಕ್ತಿಗೂ ಇದು ವೈರಿ, ನಿಜವಾದಕ್ಕೂ ಜ್ಞಾನಕ್ಕೂ ಶತ್ರು ಕೊಂಚ ಕನಸು ಕೊಂಚ ತೋರಿಕೆ, ಇಂಥ ಬರೀ ಮಾತಿನ ಅಧ್ಯಾಪಕನ ಶ್ರದ್ಧಾಭಕ್ತಿಗಳಿಂದ ಬರುವ ಶಾಂತ ವಿವೇಕವನ್ನು ಕೊಟ್ಟೀತೆ? ಅದಕ್ಕೆ ವಿರುದ್ಧವಾಗಿ ಅಶ್ರದ್ಧೆ ಮೂಢನಂಬಿಕೆಗನ್ನು, ಸ್ವಾರ್ಥಪರತೆ ಕಠೋರತೆಗಳನ್ನು ಹುಟ್ಟಿಸುತ್ತದೆ. ನಮ್ಮ ಜನತಾ ಶಿಕ್ಷಣದಲ್ಲಿ ಮಾತಿನ ಪೂಜೆ, ಗ್ರಂಥವ್ಯಾಸದ ಹುಚ್ಚು ಸರ್ವವ್ಯಾಪಿಯೂ ಬಹಳ ದೂರ ಸಾಗಿಹೋಗಿದೆ. ಇನ್ನು ಬಹುಕಾಲ ನಾವು ಹೀಗೆ ಇರಲು ಸಾಧ್ಯವಿಲ್ಲ. ನಾಗರೀಕತೆ, ನೀತಿ, ಧರ್ಮ ಎಲ್ಲ ಬಗೆಯಲ್ಲೂ ನಾವು

ನಿಶ್ಚೇತನರಾಗಿ ನಿರ್ಜೀವಸ್ಥಿತಿಯಲ್ಲಿ ಇದರಂತೆ ಪ್ರಯತ್ನಿಸಬೇಕು ಎಂದರೆ, ನಮ್ಮ ಶಿಕ್ಷಣದ ಅಂತರ್‌ದೃಷ್ಟಿಯೇ ಜ್ಞಾನದ ತಲಕಾವೇರಿಯೆಂಬುದನ್ನು ಗ್ರಹಿಸುವುದೊಂದೇ ಮಾರ್ಗ. ಪ್ರತಿಯೊಂದೂ ಇದನ್ನೇ ಖಚಿತವಾಗಿ ನನಗೆ ತಿಳಿಸುತ್ತದೆ" ಎಂದಿದಾನೆ. ಒಳಗೇನೂ ತಿರುಳಿಲ್ಲದಿದ್ದರೂ ಬರೆದ ಗ್ರಂಥಕರ್ತರಿಗೆ ಅನುಗ್ರಹ ತೋರಿಸಬೇಕೆಂದು, ಅವರಿಗೆ ಹಣ ಸಿಗಲೆಂದು ಹುಡುಗರ ಮೇಲೆ ಹೇರಿದ ಹೊರೆ ಹೊರೆ ಕೆಲಸಕ್ಕೆ ಬಾರದ ನೀರಸ ಅರುಚಿಕರ ಪಠ್ಯಪುಸ್ತಕಗಳನ್ನು ಇದಕ್ಕೆ ಕೂಡಿಸಿ. ಇದು ಹಿಂದುಸ್ಥಾನದಲ್ಲಿ ಈಗ ನಡೆಯುವ ಶಿಕ್ಷಣದ ಸಂಪೂರ್ಣ ಯಥಾರ್ಥ ಚಿತ್ರ.

ಅನಿರ್ದಿಷ್ಟ ಕಾಲ್ಪನಿಕ ಪದಗಳಿಗೆ ಒಂದು ಗೊತ್ತಾದ, ಸ್ಥಿರ ಅರ್ಥವಿಲ್ಲ. ವಾಸ್ತವ ಜಗತ್ತಿನ ಯಾವೊಂದನ್ನೂ ನಿಖರವಾಗಿ ಅವು ಸೂಚಿಸುವುದಿಲ್ಲ. ಭೌತಶಾಸ್ತ್ರದ ಸಂತಿಗಳ ಬಗ್ಗೆ ಪ್ರಾಮಾಣಿಕರೂ ವಿವೇಕಿಗಳೂ ಆದವರಲ್ಲಿ ಮತಭೇದವಿರಬಾರದು. ಅರ್ಥಶಾಸ್ತ್ರ ರಾಜ್ಯಶಾಸ್ತ್ರಗಳಂಥ ಸಮಾಜವಿಜ್ಞಾನ ಶಾಸ್ತ್ರಗಳಲ್ಲಿರುವುದೆಲ್ಲ ಅನಿರ್ದಿಷ್ಟ, ಕಾಲ್ಪನಿಕ ಶಬ್ದಸಮೂಹ. ಅದರ ಅರ್ಥ ಅಸ್ಪಷ್ಟ. ಅದು ನೀಡುವ ಜ್ಞಾನ ಅತ್ಯಂತ ಪ್ರಾಮಾಣಿಕರಲ್ಲೂ ವಿವೇಕಿಗಳಲ್ಲೂ ಮತಭೇದವನ್ನುಂಟುಮಾಡುತ್ತದೆ. ಆದುದರಿಂದ ಸ್ಪಷ್ಟ, ಸ್ಥಿರ, ನಿರ್ದಿಷ್ಟವಾದ ಪರಿವರ್ತನ ಸುಲಭವಲ್ಲದ ಅರ್ಥವುಳ್ಳ ವೈಜ್ಞಾನಿಕ ಶಬ್ದಗಳಿಗೂ ಆ ರೀತಿಯ ಲಕ್ಷಣವಿಲ್ಲದ ಇಂಥ ಅನಿರ್ದಿಷ್ಟ ಕಾಲ್ಪನಿಕ ಶಬ್ದಗಳಿಗೂ ಏನೋ ಭೇದವಿರಲೇಬೇಕು. ಒಂದು ವಾಸ್ತವ ಸಂಗತಿಗಳಿಂದ ಬಂದ ಜ್ಞಾನ, ಇನ್ನೊಂದು ಕಲ್ಪನೆಯಿಂದ ಬಂದುದು ಎರಡನ್ನೂ ವೈಜ್ಞಾನಿಕ ಜ್ಞಾನವೆಂದರೆ ಅದು ತರ್ಕದೋಷವಾಗುತ್ತದೆ.

ವಾಸ್ತವ ವಿಷಯಗಳ ಮುಖ್ಯ ಲಕ್ಷಣಗಳನ್ನು ಮಾತ್ರ ಗ್ರಹಿಸಿ ಆದರಿಂದ ಸರ್ವಸಾಮಾನ್ಯ ಶಬ್ದಗಳನ್ನು ಕಲ್ಪಿಸುತ್ತಾರೆ. ಹೀಗೆ ಕಲ್ಪನೆ ಮಾಡಿದ ಮೇಲೂ ಜೀವನದ ಮಹತ್ವಪೂರ್ಣ ವಿಷಯಗಳನ್ನು ಸಿದ್ಧಗೊಳಿಸಲು ಆ ಶಬ್ದಗಳನ್ನೇ ಬಳಸುತ್ತೇವೆ. ಬಂಡವಾಳವಾದ, ಸರ್ವಾಧಿಕಾರಿತನ, ಸಾಮ್ಯವಾದ, ಗಾಂಧೀವಾದ ಎಲ್ಲ ವಾದಗಳೂ ಇಂಥಾ ಕಾಲ್ಪನಿಕ ಸಾರಸಂಗ್ರಹ ಎಂಬುದು ಅನೇಕರಿಗೆ ತಿಳಿಯದು. ಈ ಶಬ್ದಗಳಿಗೆ ಸ್ಪಷ್ಟ, 'ಸ್ಥಿರ, ವಾಸ್ತವ ಗುರಿ ಯಾವುದೂ ಇಲ್ಲ. ಅವರವರ ರಾಗದ್ವೇಷ, ಮನೋರುಚಿ, ರಾಜಕೀಯ, ಸಾಮಾಜಿಕ, ಆರ್ಥಿಕ ಸಂಪ್ರದಾಯಗಳಂತೆ ಪ್ರತಿಯೊಬ್ಬರೂ ಅರ್ಥ ಮಾಡುತ್ತಾರೆ. ಈ ಶಬ್ದಗಳನ್ನು ಕೇಳಿದಾಗ ಈಗಿನ ಜಗತ್ತಿನಲ್ಲಿ ಎಷ್ಟು ಜನ ಶಾಂತವಾಗಿರಬಲ್ಲರು ? ಒಂದೇ ಶಬ್ದ ಬೇರೆ ಬೇರೆ ಮನಸ್ಸಿನಲ್ಲಿ ವಿರುದ್ಧ ಭಾವಗಳನ್ನು

ಕೆರಳಿಸುತ್ತದೆ. ಕಮ್ಯೂನಿಸಂ ಎಂದರೆ ಫ್ಯಾಸಿಸ್ಟನಿಗೆ ಜಗತ್ತಿನ ಸಮಸ್ತ ಘೋರ ಭಯಂಕರ ರಾಕ್ಷಸತ್ವ. ಭ್ರಷ್ಟಜೀವದ ದಾರಿ. ಅದೇ ಮಾರ್ಕ್ಸ್‌ವಾದಿಗೆ ಕಮ್ಯೂನಿಸಂ ಸರ್ವಶುಭದಾಯಕ, ಅತ್ಯಂತ ಮನೋಹರ; ಆದಕ್ಕಾಗಿ ಅವನು ಬಾಳಿಯಾನು, ಪ್ರಾಣ ತೆತ್ತಾನು. ಅಷ್ಟೇ ಅಲ್ಲ, ಅದಕ್ಕಾಗಿ ತನ್ನ ನೆರೆಹೊರೆಯುವರನ್ನು, ಹಳೆಯ ಗೆಳೆಯರನ್ನು, ಸಂಗಾತಿಗಳನ್ನು ಕೂಡ ಕೊಂದು ಬಲಿ ಕೊಟ್ಟಾನು !

ಇನ್ನೊಂದು ಉದಾಹರಣೆ :- ಮೂಲಶಿಕ್ಷಣವು ಚಿಕ್ಕಮಕ್ಕಳನ್ನು ದುಡಿಸಿ ಶೋಷಣೆ ಮಾಡುತ್ತದೆ. ಸರಿ, ಕೂಡಲೇ ಕಣ್ಣಿನ ಮುಂದೆ ಚಿತ್ರ ಅರೆಹೊಟ್ಟೆ, ಅರೆ ಬೆತ್ತಲೆ ಮಕ್ಕಳು! ಆಗ ನಮ್ಮ ಗೆಳೆಯರು ಕತ್ತಿಮಸೆಯುತ್ತಾರೆ. 'ಮಕ್ಕಳ ದುಡಿತ' ಎಂದರೇನು ಎಂದು ಅರ್ಥ ಕೊಡುವಷ್ಟು ಸಿಧಾನವಿಲ್ಲ. ಬಾಧೆ, ಶೋಷಣೆ ಆಗುವ ದುಡಿತ ಎಂಥದು? ಎಂಥ ಸನ್ನಿವೇಶದಲ್ಲಿ ದುಡಿತ ಹಾಳಾಗುತ್ತದೆ? ಇದನ್ನು ಪರಿಶೀಲಿಸರು. ಮಕ್ಕಳಿಗೆ ಕೊಟ್ಟ ಕೆಲಸ ಬಹಳ ದಣಿವಿನ ಕೆಲಸ ಎಂದು ಮಕ್ಕಳ ಶರೀರ ಶಾಸ್ತ್ರ, ಮನಶ್ಶಾಸ್ತ್ರಗಳ ಆಧಾರದಿಂದ ತೋರಿಸಿಕೊಡುತ್ತಾರೆಯೇ ಟೀಕೆಗಾರರು? ಅವರಿಗೆ ಅದು ಅಗತ್ಯವಿಲ್ಲ. ಮೂಲಶಿಕ್ಷಣದಲ್ಲಿ ಮಾಡಿಸುವ ಕೆಲಸ, ಅದಕ್ಕೆ ಗೊತ್ತು ಮಾಡಿದ ಕಾಲ ಬೆಳವಣಿಗೆಗೆ ಅಡ್ಡಿಮಾಡಿ ಅವನ ವಿಕಾಸವನ್ನು ಮೊಟಕಿಸುತ್ತದೆ ಎಂದು ತೋರಿಸಿಕೊಡುವ ಅಗತ್ಯವೂ ಅವರಿಗಿಲ್ಲ. ಮಕ್ಕಳ ಶಿಕ್ಷಣದಿಂದ, ಮಕ್ಕಳ ಜೀವನದಿಂದ ಶರೀರಶ್ರಮವನ್ನು ತೆಗೆದುಹಾಕಿದರೆ ಅವರ ಬೆಳವಣಿಗೆಗೆ ಅಡ್ಡಿಯಾಗುತ್ತದೆ ಎಂಬುದನ್ನು ಈ ಟೀಕೆಗಾರರಿಗೆ ತಿಳಿಸಿ ಹೇಳಿದರೂ ಪ್ರಯೋಜನವಿಲ್ಲ. ಇವೊತ್ತು ಎಲ್ಲರೂ ಉಗ್ಗಡಿಸಿ ಹೇಳುತ್ತಿರುವ ವೈಜ್ಞಾನಿಕ ಶೋಧನೆ, ಪರಿಶೀಲನೆ ಎಂದೋ ಯಾವ ಕಾಲದಲ್ಲೋ ಮುಗಿದುಹೋಗಿವೆ. ಅದರ ಫಲವೇ ಮಕ್ಕಳ ದುಡಿತ, ಶೋಷಣೆ ಎಂಬ ಶಬ್ದಗಳು. ಅತ್ಯವಶ್ಯಕ ಉಪಯುಕ್ತ ಆದ ಸುಧಾರಣೆಯನ್ನು ಕೆಡವಿ ಹಾಕಲಿಕ್ಕೆ ಅವನ್ನೀಗ ಬಳಸಬಹುದು. ಹೀಗೆ ನಾವು ಕೆಲವರು ಯೋಚಿಸುತ್ತಿದ್ದ ಹಾಗೆ ಇದೆ.

ಸಮತೆ, ನಾಗರಿಕ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಕೂಲಿಗಾರರ ಮುಷ್ಕರ ಸ್ವಾತಂತ್ರ್ಯ, ಇತ್ಯಾದಿ ಶಬ್ದಗಳಿಂದ ಕೊನೆಯಿಲ್ಲದ ವಾದ-ವಿವಾದ ಹುಟ್ಟಿವೆ. ಈ ಪಂಡಿತಪುಂಗವರ ತಾತ್ವಿಕ ವಾದವಿವಾದಗಳೆಲ್ಲ ಅವರವರ ಗುಂಪಿನಲ್ಲೇ ನಡೆದು ಬೀದಿಗೆ, ಸಂತೆಗೆ ಹರಡದಂತೆ ಆದರೆ ಅಂಥ ಜಗತ್ತು ಸುಖಿಯಾದೀತು. ಬೀದಿಗಿಳಿದ ಈ ಜಗಳಗಳು ಹಿಂದೆ ವಿಧರ್ಮಿಗಳ, ಅಧರ್ಮಿಗಳ ಸಜೀವ ದಹನ ಮಾಡಿಸಿವೆ. ಈಗ ರಾಷ್ಟ್ರೀಯ, ಅಂತರ ರಾಷ್ಟ್ರೀಯ

ಯುದ್ಧಗಳನ್ನು, ವರ್ಗದ್ವೇಷ, ವರ್ಗಸಂಘರ್ಷಣೆಗಳನ್ನು, ಮಾಡಿಸುತ್ತಿವೆ.

ಮತಾಂಧತೆ, ಶಾಸ್ತ್ರದ ಉದ್ಧಟತನಗಳು ಅಂಧಕಾರ ಯುಗ ಧಾರ್ಮಿಕಯುಗಗಳ ಗುತ್ತಿಗೆಯೇನಲ್ಲ. ಅದಕ್ಕೆ ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಮನಸ್ಸುಗಳಿಗೆ ಬೇರೆ ಬೇರೆ ಶ್ರದ್ಧೆಗೆ, ಕಾರ್ಯಗಳಿಗೆ ಅಂಟಿಕೊಳ್ಳುವ ಚಟವಿದೆ. ಹಿಂದೆ ಮತಾಂಧತೆ ಬಹುಶಃ ಧಾರ್ಮಿಕರಲ್ಲಿ ಪುರೋಹಿತರಲ್ಲಿ ಇತ್ತು. ಈಗ ಆರ್ಥಿಕ, ರಾಜಕೀಯ, ವಿಜ್ಞಾನ ಕ್ಷೇತ್ರಗಳಲ್ಲಿ ಕೂಡ ಈ ವಿರಸ-ರಾಕ್ಷಸ ಪ್ರವೇಶಿಸಿದಾನೆ, ಶಿಕ್ಷಣದಲ್ಲಿ ಪರಿವರ್ತನೆಯಾಗಬೇಕೆಂದರೆ ಸರ್ವಸಾಮಾನ್ಯ ಭಾವಸೂಚಕ ಕಾಲ್ಪನಿಕ ಶಬ್ದಗಳನ್ನು ಸಕ್ರಮವಾಗಿ ಬಳಸುವ ಶಿಸ್ತು ರೂಢಿಯಾಗಬೇಕು. ಧ್ಯೇಯವಚನ, ರಮ್ಯವಚನಗಳ ಪ್ರಭಾವವನ್ನು ಸ್ವಲ್ಪವಾದರೂ ತಗ್ಗಿಸಲು, ಜ್ಞಾನಾರ್ಜನೆಗಾಗಿ ಇಟ್ಟ ಒಂದೊಂದು ಹೆಜ್ಜೆಯ ಪರಿಣಾಮವನ್ನೂ ಪ್ರಯೋಗ ಪದ್ಧತಿಯ ಮೂಲಕ ಪರೀಕ್ಷಿಸುವ ಸಕ್ರಿಯ ಶಿಕ್ಷಣ ಪದ್ಧತಿಗೆ ಸಾಧ್ಯ. ಆಗ ಮಾತು ಮಂತ್ರ ಈಗಿನಂತೆ ವಿಸ್ತಾರ ಜನಸ್ತೋಮಕ್ಕೆ ಬೆದರು ಗೊಂಬೆಯಾಗಲಾರದು. ಅಷ್ಟರ ಮಟ್ಟಿಗಾದರೂ ಈ ಲೋಕ ಹೆಚ್ಚು ಆರೋಗ್ಯ, ಹರ್ಷ ತುಂಬಿ ನಿವಾಸ ಯೋಗ್ಯವಾದ್ದಿತು. ★

ಸಂಹಾರಕಾಸ್ತ್ರಗಳು ೧೭ ನೇ ಪುಟದಿಂದ

ಅವ್ಯಾವಹಾರಿಕವಲ್ಲ : ಇವೇನೂ ಅವ್ಯಾವಹಾರಿಕ, ಅಸಾಧ್ಯಕರ ಸಲಹೆಗಳಲ್ಲ. ಸ್ಥಾನೀಯ ಪ್ರಾಂತೀಯ ಮತ್ತು ರಾಷ್ಟ್ರೀಯ ಸರ್ಕಾರಗಳ ರಚನೆಯಾದುದು ಇದೇ ಕ್ರಮಿಕ ವಿಕಾಸದ ಪದ್ಧತಿಯಲ್ಲೇ. ಹಾಗೆಯೇ ವಿಶ್ವ ಸರ್ಕಾರವೂ ಆದೀತು. ಈಗಾಗಲೇ ಅಂತರರಾಷ್ಟ್ರೀಯ ಶಾಂತಿಸೇನೆ ಕಾಲಕಾಲಕ್ಕೆ ರಚನೆಯಾಗಿ ಕಾರ್ಯನಿರತವಾಗಿದೆ. ಅದಕ್ಕೆ ಸ್ಥಾಯಿರೂಪ ಕೊಡುವುದಷ್ಟೆ ಈಗ ಆಗಬೇಕಾದ ಕೆಲಸ. ಆದುದರಿಂದ ಇದನ್ನು ಅವ್ಯಾವಹಾರಿಕವೆಂದು ಒಮ್ಮೆಲೇ ತಳ್ಳಿಹಾಕಲಾರದು.

ಪರಮಾಣು ಶಸ್ತ್ರಗಳಿಂದುಂಟಾದ ಸಮಸ್ಯೆ ವೈಶ್ವಿಕವಾದ್ದರಿಂದ ಅದಕ್ಕೆ ಸೂಚಿಸುವ ಪರಿಹಾರವೂ ವೈಶ್ವಿಕವೇ ಆಗಿರಬೇಕು. ಯತ್ರ ವಿಶ್ವಂ ಭವತಿ ಏಕ ನೀಡಂ ಇಡೀ ವಿಶ್ವ ಒಂದು ಗೂಡಿನಂತಾಗಲಿ ಎಂಬ ವೈದಿಕ ಋಷಿಗಳ ಚಿಂತನೆಗೆ ಅನುಗುಣವಾಗಿದೆ. ರಾಷ್ಟ್ರಗಳು ಅದಕ್ಕಾಗಿ ಮಾಡುವ ಕಿಂಚಿತ್ ತ್ಯಾಗ ಹೆಚ್ಚಿನೂ ಅಲ್ಲ; ಅತ್ಯಂತ ಅಪೇಕ್ಷಣೀಯ. ★

ಗೋವಂಶ ಹತ್ಯೆಯ ಕಳಂಕವನ್ನು ದೂರಮಾಡಿ

–ಬಲದೇವರಾಜ್

ಪ್ರಾಚೀನ ಕಾಲದಿಂದಲೂ ಬೇಸಾಯ, ಹಾಲು, ಭಾರವಹನ ಇತ್ಯಾದಿ ಸೇವೆಗಳನ್ನು ಕೊಡುವ ಸಾಧನ ನಮ್ಮ ದೇಶದಲ್ಲಿ ಮುಖ್ಯ ಪಶು ಗೋವಂಶ, ಆದರೆ ಇಂದು ಸಂವಿಧಾನ ಮತ್ತು ಕಾನೂನಿನ ವ್ಯಾಖ್ಯೆಯ ಮೂಲಕ ಚರ್ಮ, ಮಾಂಸ ಇತ್ಯಾದಿಗಳ ಲೋಭದಿಂದಾಗಿ ಈ ಪಶುವಿನ ಹತ್ಯೆ ಗಂಭೀರ ಸ್ಥಿತಿಗೆ ಮುಟ್ಟಿದೆ. ಸರಕಾರವು ಲೋಭದ ಕಾರಣದಿಂದ ವ್ಯರ್ಥವಾಗಿ ತರ್ಕ–ಕುತರ್ಕ ಮಾಡಿ ಗೋವಂಶದ ಹತ್ಯೆಯನ್ನು ಮಾಡಿಸುತ್ತಿದೆ. ಈ ವಿಷಯವಾಗಿ ಸರ್ಕಾರವು ರಾಷ್ಟ್ರಹಿತ ದೃಷ್ಟಿಯಿಂದ ಗಂಭೀರವಾಗಿ ಆಲೋಚಿಸಬೇಕಾಗಿದೆ.

ಸಂವಿಧಾನದಲ್ಲಿ ಹಸು ಮತ್ತು ಕರುಗಳ ಪೂರ್ಣ ರಕ್ಷಣೆಯ ಮಾತನ್ನು ಹೇಳಲಾಗಿದೆ. ಇದರಿಂದಂತೂ ಪೂರ್ಣ ಗೋವಂಶದ ರಕ್ಷಣೆ ಸ್ಪಷ್ಟವಾಗಿ ಗೋಚರಿಸುತ್ತಿದೆ. ಪ್ರಾಚೀನ ಕಾಲದಿಂದ ಭಾರತದಲ್ಲಿ 'ಗೋ' ಅಥವಾ ಹಸು ಇದರ ಅರ್ಥ ಪೂರ್ಣವಾಗಿ ಗೋವಂಶವೇ ಆಗಿದೆ. ಹಳೇ ಶಬ್ದಕೋಶದಲ್ಲಿ ಕೂಡ ಗೋ ಇದರ ಅರ್ಥ ಗೋವಂಶವೇ. ವ್ಯವಹಾರದಲ್ಲಿಯೂ ಹೀಗೆ ಇದೆ. ಎರಡೂ ಸಮಾನ ಉಪಯೋಗಿಯಾಗಿವೆ. ಎತ್ತುಗಳಿಲ್ಲದ ಕೃಷಿಯ ಬಗ್ಗೆ ನಮ್ಮ ದೇಶದಲ್ಲಿ ಕಲ್ಪನೆಯನ್ನೂ ಮಾಡಲಾರೆವು. ಭಾರವಹನ ಜೈವಿಕ ಗೊಬ್ಬರ ಇತ್ಯಾದಿ ಅನೇಕ ಸೇವೆಗಳನ್ನು ಎತ್ತೇ ಮುಖ್ಯವಾಗಿ ಕೊಡುತ್ತದೆ. ಹಸೂ ಸಹ ಅಮೃತ ಸಮಾನವಾದ ಹಾಲನ್ನೂ ಮತ್ತು ಇತರ ಅನೇಕ ಸೇವೆಗಳನ್ನೂ ಕೊಡುತ್ತದೆ. ಆ ಎತ್ತಿನ ಜನ್ಮದಾತೆ ಕೂಡ ಹಸುವೇ. ಒಂದು ವೇಳೆ ಸಂವಿಧಾನದ ಹೋರಿ ಎಂಬ ಶಬ್ದವನ್ನು ಬೇರೆಯಾಗಿ ಕಾಣಿಸದೇ ಇರುವುದರಿಂದ ಹಸು ಎಂಬ ಪಶುವಿನಲ್ಲಿ ಹೋರಿ ಕೂಡ ಸೇರಿದೆ ಎಂದು ಸಂವಿಧಾನದ ನಿರ್ಮಾಪಕರು ಅರ್ಥ ಮಾಡಿಕೊಂಡಿರಬಹುದು. ಏಕೆಂದರೆ ಹೋರಿಯೇ ದೊಡ್ಡದಾಗಿ ಎತ್ತು ಆಗುವಂತೆ ಕರು ಶಬ್ದದ ಅರ್ಥ ಹಸು ಎಂದಾಗುತ್ತದೆ. ಆದ್ದರಿಂದ ಕರು ಬೆಳೆದು ಹಸು ಆಗುವವರೆಗೆ ಮತ್ತು ಹೋರಿ ಬೆಳೆದು ಎತ್ತು ಆಗುವವರೆಗೆ ನಿರೀಕ್ಷಣೆ ಮಾಡಲೇಬೇಕಾಗುತ್ತದೆ.

ಯಾರು ಏನೇ ಹೇಳಲಿ ಈ ಪಶುಗಳು ಹಳ್ಳಿಗಳಲ್ಲಿ ಹೆಚ್ಚಾಗಿ ಹುಲ್ಲು, ಕಾಡಿನ ಎಲೆ, ಹೊಟ್ಟು ಇತ್ಯಾದಿ ತ್ಯಾಜ್ಯ ಪದಾರ್ಥಗಳನ್ನು ತಿಂದು ದೇಶಕ್ಕೆ ಅಮೂಲ್ಯವಾದ ಸೇವೆಗಳನ್ನು ಮಾಡುತ್ತವೆ, ಇಂಥ ಯಾವುದೇ ಪಶುಗಳಾಗಲೀ ಉದಾಹರಣೆಗೆ ಎಮ್ಮೆ, ಕುದುರೆ, ಒಂಟೆ ಇವುಗಳ ರಕ್ಷಣೆ ಮಾಡುವುದು ನಮ್ಮ ಕರ್ತವ್ಯವಾಗಿದೆ. ಗೋವನ್ನಂತೂ ನಾವು ಪ್ರಾಚೀನ ಕಾಲದಿಂದಲೇ

ಪೂರ್ಣ ರೂಪವಾಗಿ ನಮ್ಮ ಕುಟುಂಬ ವರ್ಗದಲ್ಲಿ ಸೇರಿಸಿಕೊಂಡಿದ್ದೇವೆ. ಗೋವಂಶವು ಉಪಯುಕ್ತವೂ, ಸೌಮ್ಯವೂ ಆಗಿದೆ. ಇದರ ಮೃದುವಾದ ಚರ್ಮಕ್ಕೆ ದೇಶ–ವಿದೇಶಗಳಲ್ಲಿ ಬಹಳ ಬೆಲೆ ಸಿಗುತ್ತದೆ. ಇಂದು ಹೆಚ್ಚಿನ ಹೊಡೆತ ಈ ಪಶು ಮೇಲೆಯೇ ಬೀಳುತ್ತಿದೆ. ಮನುಷ್ಯರಾದ ನಮ್ಮ ಕರ್ತವ್ಯ ಏನು ?

ಗೋವಂಶದ ನೇರ ಸಂಪರ್ಕ ಗ್ರಾಮಗಳಿಗೂ ಮತ್ತು ರೈತರಿಗೂ ಬರುತ್ತದೆ. ಇಲ್ಲಿಂದಲೇ ನಮ್ಮ ಆಹಾರ, ಹಾಲು, ತರಕಾರಿ ಮತ್ತು ಇತರೆ ಪದಾರ್ಥಗಳು ದೊರೆಯುತ್ತವೆ. ಇವುಗಳ ಉತ್ಪಾದನೆಯಲ್ಲಿ ಈ ವಂಶದ ಸಹಕಾರ ಬಹಳಷ್ಟಿದೆ. ಗೋವಂಶದ ಸಹಾಯದಿಂದ ರೈತನ ಜೀವನ ನಡೆಯುತ್ತದೆ. ಯಾವುದೇ ಪರಿಸ್ಥಿತಿಯಲ್ಲಿ ಯಾವುದೇ ರೈತ ಅಥವಾ ಹಳ್ಳಿಯ ಸಂಪರ್ಕ ಇರುವ ಯಾವುದೇ ವ್ಯಕ್ತಿ ಗೋವಂಶೆಯ ಹತ್ಯೆಯ ಬಗ್ಗೆ ಕಲ್ಪನೆಯನ್ನೂ ಮಾಡಲಾರ. ದೇಶದ ಈ ಅವಶ್ಯಕತೆಯನ್ನು, ಭಾವನೆಗಳನ್ನು ಸರಕಾರವಾಗಲೀ ಕಾನೂನಾಗಲೀ ಗಮನಿಸಬಾರದೆ ? ಆದರೆ ಇದಕ್ಕೆ ತೀರ ವಿರುದ್ಧವಾಗಿ ಕಾನೂನು, ಸಂವಿಧಾನ, ರಾಜ್ಯಗಳ ವಿಷಯ ಇತ್ಯಾದಿಗಳನ್ನು ಹೇಳುತ್ತ ಬಹಳ ದೊಡ್ಡ ಪ್ರಮಾಣದಲ್ಲಿ ಗೋವಂಶದ ಹತ್ಯೆಯಾಗುತ್ತಿದೆ. ಯಾವ ಪಶುವಿನ ಶ್ರಮದಿಂದ ಅನ್ನ ಊಟ ಮಾಡುತ್ತೇವೆಯೋ, ಹಾಲು ಕುಡಿಯುತ್ತೇವೆಯೋ, ಅದರ ಸೇವೆಯನ್ನು ಪಡೆಯುತ್ತೇವೆಯೋ, ಯಾವ ಪಶು ನಮ್ಮ ಕೃಷಿ ಮತ್ತು ಗ್ರಾಮೀಣ ಅರ್ಥವ್ಯವಸ್ಥೆಯ ಬೆನ್ನುಮೂಳೆಯಾಗಿದೆಯೋ, ಆ ಪಶುವಿನ ಚರ್ಮ ಸುಲಿದು ದೇಶ–ವಿದೇಶಗಳಲ್ಲಿ ವ್ಯಾಪಾರ ಮಾಡಿದರೆ ನಮ್ಮ ಸಂವಿಧಾನ, ಕಾನೂನು, ಸಂಸ್ಕೃತಿ, ಮಾನವತೆ, ಗ್ರಾಮೀಣ ಅರ್ಥವ್ಯವಸ್ಥೆ ಮತ್ತು ಅದರೊಂದಿಗೆ ನಮ್ಮ ಬುದ್ಧಿ ಕೂಡ ನಾಶವಾಗುವುದಿಲ್ಲವೆ ?

ರಾಸಾಯನಿಕ ಯೂರಿಯಾದಿಂದ ಹೆಚ್ಚು ಇಳುವರಿ ದೊರೆಯುತ್ತದೆಂದು ಸರಕಾರ ಹೇಳುತ್ತದೆ. ಆದರೆ ಇದರೊಂದಿಗೆ ಅನೇಕ ಭಯಂಕರವಾದ ಹಾನಿಗಳೂ ಸಹ ಆಗುತ್ತವೆಂಬುದು ಸರಕಾರ್ಕಕೆ ಗೊತ್ತಿಲ್ಲವೆ? ಇಂದು ಕೂಡ ಕೇವಲ ಜೈವಿಕ ಗೊಬ್ಬರ ಉಪಯೋಗಿಸಿ ರಾಸಾಯನಿಕ ಗೊಬ್ಬರಕ್ಕೆ ಸರಿಸಮಾನಾಗಿ ಆಹಾರ ಬೆಳೆಯುವ ಎಷ್ಟೋ ರೈತರು ಇದ್ದಾರೆ, ತೋಟಗಳೂ ಇವೆ. ಸರಕಾರ ಈ ಸಾಧನೆಗಳನ್ನು ಏಕೆ ನೋಡುವುದಿಲ್ಲ ? ಮಾಂಸದ ರಫ್ತನ್ನು ಮಾಡದಿದ್ದರೆ ಹಣದ ಆಸೆಗಾಗಿ ನಮ್ಮ ಪಶುಗಳು ಇಷ್ಟು ವೇಗವಾಗಿ ಕಡಿಯಲ್ಪಡುವುದಿಲ್ಲ. ಜೊತೆಗೆ, ನಮ್ಮ ಸಂಸ್ಕೃತಿ, ಮಾನವತೆ, ಪಶುಧನ ಹೋಂದುವುದಿಲ್ಲ. ಕೊನೇ ಪಕ್ಷ ಮಾಂಸಾಹಾರ ಭೋಜನಕ್ಕೆ ಸರಕಾರ ಸ್ವಯಂ ಪ್ರೋತ್ಸಾಹ ಕೊಡದೇ ಇರಲಿ.

ಹಸು – ಎತ್ತು ಮಾತನಾಡಲಾರವು, ನ್ಯಾಯಾಲಯ ಹೋಗಲಾರವು, ಹತ್ಯೆಯಲ್ಲಿ ಭಾರಿ ಲಾಭವಿದೆ. ಹತ್ಯೆಯ ದಂಧೆಯಲ್ಲಿ ಲೋಭವಿದೆ, ಭ್ರಷ್ಟಾಚಾರವಿದೆ. ಇದರಲ್ಲಿ ತೊಡಗಿರುವ ಜನ ರಾಷ್ಟ್ರಹಿತ ಆಲೋಚಿಸಲಾರರು ಇಂಥದರಲ್ಲಿ ಕಾನೂನಿನಲ್ಲಿ ಲೇಶಮಾತ್ರ ರಿಯಾಯಿತಿ ತೋರಿಸುವುದು ಭಯಂಕರ ಸಂಕಟ ಮತ್ತು ಚಿಂತೆಯ ವಿಷಯ ಆಗಿರುತ್ತದೆ.

ಇಂದು ಕೂಡ ಭಾರತದ ರೈತರು ಮತ್ತು ಜನತೆ ಅಲ್ಲಲ್ಲಿ ಗೋವಂಶದ ಹತ್ಯೆಯಾಗುತ್ತಿದೆ ಎಂದು ಮಾತ್ರ ಕೇಳಿದ್ದಾರೆ. ಆದರೆ ಕಾನೂನು ಮೂಲಕವೇ ಗೋವಂಶದ ಹತ್ಯೆ ವ್ಯಾಪಕವಾಗಿ ಆಗುತ್ತಿದೆಯೆಂಬುದು ಅವರಿಗೆ ಗೊತ್ತಿಲ್ಲ. ಆ ಹತ್ಯೆಯ ಅಂದಾಜು ಮತ್ತು ಕಲ್ಪನೆಯನ್ನು ಕೂಡ ಮಾಡುವುದು ಕಠಿಣ. ಇದನ್ನು ಪ್ರತ್ಯಕ್ಷವಾಗಿ ನೋಡಿದರೇನೆ ಗೊತ್ತಾಗುವುದು. ದೊಡ್ಡ ನಗರಗಳಲ್ಲಿ ನಾಲ್ಕು ಕಡಗೂ ಕಟ್ಟಲಾದ ಎತ್ತರದ ಗೋಡೆಗಳ ಮಧ್ಯ ಇರುವ ಕಸಾಯಿ ಖಾನೆಗಳಲ್ಲಿ ಮತ್ತು ಹಳ್ಳಿಗಳಲ್ಲಿ ನಿರ್ಜನ ಸ್ಥಳಗಳಲ್ಲಿ ಅಡಗಿರುವ ಕಸಾಯಿಖಾನೆಗಳಲ್ಲಿ ಗೋವಂಶದ ಈ ಹತ್ಯೆಯ ದರ್ಶನವಾಗುತ್ತದೆ. ಕೋಟ್ಯಾವಧಿ ಜನರು ಈ ನಿಜ ಸಂಗತಿಯನ್ನು ತಿಳಿದಿಲ್ಲ. ಉದಾಹಣೆಗೆ ಹೇಳುವುದಾದರೆ, ಮುಂಬೈ ಮತ್ತು ಕೊಲಕತಾ ನಗರಗಳಲ್ಲಿ ಗೋವಂಶ ಹತ್ಯೆಯ ವಿಶಾಲ ಕೇಂದ್ರಗಳಿವೆ. ಮಹಾರಾಷ್ಟ್ರದಲ್ಲಿ ಗೋಹತ್ಯೆಯ ಪೂರ್ಣ ನಿಷೇಧವಿದೆ. ಆದರೆ ಅದೇ ಕಾನೂನನ್ವಯ ವಯಸ್ಸಾದ, ಕೆಲಸಕ್ಕೆ ಬಾರದ, ಅಂಗನ್ಯೂನತೆಯಿರುವ ಎತ್ತುಗಳನ್ನು ಕಡಿಯಬಹುದು. ಆದರೆ ಈ ಕಾನೂನಿನ ನೆರವಿನಿಂದಲೇ ಉತ್ತಮವಾದ ಎತ್ತುಗಳನ್ನೂ, ಹೋರಿಗಳನ್ನೂ, ಹಸುಗಳನ್ನೂ ಕಡಿಯಲಾಗುತ್ತದೆ. ಕಡಿಯುವವರಿಗೆ ಹಣ ಬೇಕೆ ವಿನಹ ಕಾನೂನು, ಎತ್ತು ಅಥವಾ ಹಸು ಅಲ್ಲ. ಇದೇ ಕಾನೂನಿನ ಸಹಾಯದಿಂದ ಸ್ವಯಂ ಸರಕಾರದ ಸಾವಿರಾರು ಕಸಾಯಿಖಾನೆಗಳು ನಡೆಯುತ್ತಿವೆ. ಜೊತೆಗೆ, ಇವುಗಳ ಆಸುಪಾಸುನಲ್ಲಿ ಇನ್ನೂ ಸಾವಿರಾರು ಗೈರಕಾನೂನಿ ಕಟುಕರ ಅಂಗಡಿಗಳು ನಡೆಯುತ್ತವೆ,

ಇನ್ನು ಪ್ರಪಂಚದಲ್ಲಿಯೇ ಎರಡನೇ ದೊಡ್ಡದಾದ ಮತ್ತು ಏಶಿಯಾ ಖಂಡದಲ್ಲಿ ಅತ್ಯಂತ ದೊಡ್ಡದಾದ ಮುಂಬೈಯಲ್ಲಿ ಇರುವ ದೇವನಾರ್ ಕಸಾಯಿಖಾನೆಯ ದೃಶ್ಯವನ್ನು ನೋಡೋಣ. ಅದು ಸರಕಾರಿ. ಅದನ್ನು ಮುಂಬೈ ನಗರಪಾಲಿಕೆ ನಡೆಸುತ್ತದೆ. ಆದು ಬಹಳ ವಿಶಾಲವಾದ ಪ್ರದೇಶದಲ್ಲಿ ಇದೆ. ಅದರ ನಾಲ್ಕೂ ಸಿಟ್ಟಿನಲ್ಲಿ ಬಹಳ ಎತ್ತರೆತ್ತರವಾದ ಗೋಡೆಗಳಿವೆ. ಪಶುಗಳು ಒಳಗೆ ಹೋಗಲು ದೊಡ್ಡ ಬಾಗಿಲಿದೆ. ಆ ಬಾಗಿಲ ಬಳಿ ಒಂದು ಫಲಕ ಇದೆ. ಅದರ ಮೇಲೆ ಈ ರೀತಿ ಬರೆದಿದೆ. "ಕೆಲಸಕ್ಕೆ ಉಪಯೋಗವಾಗುವ

ಎತ್ತು ಇತ್ಯಾದಿಗಳನ್ನು ಒಳಗೆ ಕಡಿಯುವುದಕ್ಕಾಗಿ ತರಕೂಡದು." ಇದರ ಅರ್ಥ ಯಾರಿಗಾದರೂ ಆಗುತ್ತದೆ. ಈಗ ಈ ಫಲಕ ಕೆಳಗೆ ಬಿದ್ದುಹೋಗಿದೆ. ಈ ಕಸಾಯಿ ಖಾನೆಯಲ್ಲಿ ಅತ್ಯಂತ ಶ್ರೇಷ್ಠ ಎತ್ತುಗಳನ್ನು ಕಡಿಯಲಾಗುತ್ತದೆ. ಬಹಳ ಉತ್ತಮ ತಳಿಯ ಎತ್ತುಗಳು ಯಾವುವೋ, ಸಾವಿರಾರು ಎತ್ತುಗಳನ್ನು ಹುಡುಕಿದರೂ ಸಿಗುವುದಿಲ್ಲವೋ, ಅಂತಹ ಎತ್ತುಗಳೂ ಕೂಡ ಕಡಿಯಲ್ಪಡುತ್ತವೆ. ಇಂಥ ಒಳ್ಳೆಯ ಎತ್ತುಗಳ ಕೊಲೆ ಆಗದಂತೆ ನೋಡಿಕೊಳ್ಳುವುದಕ್ಕಾಗಿ ಡಾಕ್ಟರರು, ಸುರಕ್ಷಾ ಅಧಿಕಾರಿಗಳು, ಜೀವ ದಯಾ ಸಂಘದವರು ಕೂಡಾ ಇರುತ್ತಾರೆ. ಆದರೆ ಇವರೆಲ್ಲರ ಪ್ರಭಾವ ಶೂನ್ಯ. ಏಕೆಂದರೆ, ಕಸಾಯಿಖಾನೆ ಕೇವಲ ಲೋಭ ಮತ್ತು ಕೊಲೆಯಿಂದ ಮಾತ್ರ ನಡೆಯಲು ಸಾಧ್ಯ. ಈ ಕಸಾಯಿ ಖಾನೆಗೆ ದಿನದ ೨೪ ಗಂಟೆಗಳ ಕಾಲವೂ ಭಾರತದ ಅನೇಕ ಭಾಗಗಳಿಂದ, ಎಲ್ಲಿ ಗೋವಂಶ ಹತ್ಯೆಯು ಕಾನೂನನ್ವಯ ನಿಷೇಧಿಸಲ್ಪಟ್ಟಿದೆಯೋ ಅಲ್ಲಿಂದಲೂ ಪ್ರಾಯದ ಎತ್ತುಗಳು ಕಡಿತಕ್ಕಾಗಿ ಬರುತ್ತವೆ. ಉದಾ : ಗುಜರಾತ, ರಾಜಸ್ಥಾನ, ಮಧ್ಯಪ್ರದೇಶ, ಉತ್ತರಪ್ರದೇಶ, ಕರ್ನಾಟಕ. ಟ್ರಕ್‌ಗಳಲ್ಲಿ ಎತ್ತುಗಳನ್ನು ಸ ರ ಕು ಗ ಳ ಂ ತೆ ಪ್ಯಾಕ್ ಮಾಡಿರುತ್ತಾರೆ. ಎತ್ತುಗಳನ್ನು ಸರಕುಗಳೆಂದೇ ಕರೆಯುತ್ತಾರೆ. ಟ್ರಕ್‌ನವರ ಬಳಿ ಯಾವ ಕಾನೂನಿನ ದಾಖಲೆಗಳೂ ಇರುವುದಿಲ್ಲ. ಕೇವಲ ಭ್ರಷ್ಟಾಚಾರದ ಮೂಲಕ ಅವುಗಳನ್ನು ಇಲ್ಲಿಗೆ ತರಲಾಗುತ್ತದೆ. ಕಸಾಯಿಖಾನೆಯ ದೃಶ್ಯ ಹೊರಗಿನಿಂದ ನೋಡಲು ಆಗುವುದಿಲ್ಲ. ಈ ಕಸಾಯಿಖಾನೆಯು ಸ್ವಲ್ಪ ದೂರದಲ್ಲಿ ರೈಲುನಿಲ್ದಾಣ ಇದೆ. ನಿಲ್ದಾಣದ ಮೇಲುಸೇತುವೆಯ ಮೇಲೆ ನಿಂತು ನೋಡಿದರೆ ಸಾವಿರಾರು ಬಿಳಿ ಎತ್ತುಗಳ ಸಮೂಹ ಕಾಣುತ್ತದೆ. ಈ ದೃಶ್ಯ ಪ್ರತಿದಿನ, ಪ್ರತಿ ನಿಮಿಷವೂ ಕಾಣುತ್ತದೆ. ಎತ್ತುಗಳು ಕಡಿತಕ್ಕಾಗಿ ಬರುತ್ತಲೇ ಇವೆ, ಕಡಿತವಾಗುತ್ತಲೇ ಇರುತ್ತದೆ. ಇಂಥ ಪರಿಸ್ಥಿತಿಯು ಉದ್ದಗಲಕ್ಕೂ ಹರಡಿರುವ ಸಾವಿರಾರು ಕಸಾಯಿ ಖಾನೆಗಳಲ್ಲಿ ನೋಡಲು ಸಿಗುತ್ತದೆ.

ಸಂವಿಧಾನದ ವಿಧಿ ೫೧ (ಅ) ಮೇರೆಗೆ ಪ್ರಾಣಿಗಳ ಪ್ರತಿ ಕರುಣೆ ತೋರುವುದು ಭಾರತೀಯ ನಾಗರಿಕನ ಕರ್ತವ್ಯ ಇದೆ ಎಂದು ಹೇಳಲಾಗಿದೆ; ಕ್ರೂರತೆಯ ವಿರುದ್ಧವಾಗಿ ಕಾನೂನು ಇದೆ. ಪಶುಗಳನ್ನು ಕಡಿಯುವಾಗ ಕ್ರೂರತೆ ಪ್ರತಿ ಹಂತದಲ್ಲೂ ಇವೆ. ಉದಾಹರಣೆಗೆ ಟ್ರಕ್ ಬಾಡಿಗೆ ಉಳಿಸಲು ಎತ್ತುಗಳನ್ನು ಒತ್ತಿ ಒತ್ತಿ ತುಂಬಲಾಗುತ್ತದೆ. ಎತ್ತುಗಳ ಮೇಲೆ ಎತ್ತನ್ನು ನಿಲ್ಲಿಸಲಾಗುತ್ತದೆ: ಹಸಿವು-ಬಾಯಾರಿಕೆ, ಯಾವುದೇ ಉಪಚಾರವಿರದೆ ಇಡಲಾಗುತ್ತದೆ. ಒಂದು ಎತ್ತಿನ ಕೊಂಬು ಇನ್ನೊಂದರ ಕಣ್ಣಿಗೆ ಮತ್ತು ಶರೀರಕ್ಕೆ ಚುಚ್ಚುವುದು ಸರ್ವೆ

ಸಾಮಾನ್ಯ: ಅವುಗಳ ಗೊರಸುಗಳಿಗೆ ಗಾಯವಾಗುವುದು. ಅಲ್ಲಿ ರಕ್ತ ಹರಿಯುವುದು ಕೂಡ ಸಾಮಾನ್ಯವಾಗಿರುತ್ತದೆ. ಇಷ್ಟೆಲ್ಲ ಹಿಂಸೆಗಳನ್ನು ಅನುಭವಿಸುತ್ತ ಪ್ರಯಾಣ ಮಾಡಿ ಬರುವ ಎತ್ತುಗಳು ಟ್ರಕ್‌ನಿಂದ ಸ್ವಯಂ ಇಳಿಯಬೇಕಾಗುತ್ತದೆ. ಹಾಗೆ ಅವು ಇಳಿಯದಿದ್ದರೆ ಅವುಗಳಿಗೆ ಹಗ್ಗ ಕಟ್ಟಿ ಎಳೆದು ಹೊರಗೆ ಹಾಕಲಾಗುತ್ತದೆ. ಮುಂದೆ ಅವು ನಡೆಯದಿದ್ದರೆ ಅವುಗಳಿಗೆ ಬಲವಾಗಿ ಹೊಡೆಯಲಾಗುತ್ತದೆ, ಕಣ್ಣುಗಳಲ್ಲಿ ಖಾರದ ಪುಡಿ ಅಥವಾ ತಂಬಾಕು ಪುಡಿ ಹಾಕಲಾಗುತ್ತದೆ. ಈ ರೀತಿ ಹಿಂಸೆ ಕೊಟ್ಟಷ್ಟೂ ಎತ್ತು ದುರ್ಬಲವಾಗುತ್ತದೆ. ಆದರಿಂದಾಗಿ ಅದು ಬೇಗ ಕಡಿಯಲ್ಪಡುತ್ತದೆ. ಓಡಾಡುವ ಎತ್ತುಗಳು ೧-೨ ದಿನ ಕಾಯಬೇಕಾಗುತ್ತದೆ.

ಗೋವಂಶದ ಹತ್ಯೆಯ ಕೆಲಸದಲ್ಲಿ ಎಲ್ಲ ಸಂಪ್ರದಾಯದ ಜನರೂ ತೊಡಗಿದ್ದಾರೆ. ಈ ಕೆಲಸದಲ್ಲಿ ಬ್ರಾಹ್ಮಣರೂ, ಜೈನರೂ ಸಹ ಶಾಮೀಲಾಗಿದ್ದಾರೆ. ಇದಕ್ಕೆಲ್ಲಾ ಮುಖ್ಯ ಕಾರಣ ಗೋವಂಶ ಹತ್ಯೆಯ ದಂಧೆಯಲ್ಲಿರುವ ಲೋಭ ಮತ್ತು ಲಾಭ. ಕಾನೂನನ್ನು ರಚಿಸುವಾಗ ಸರಕಾರ ಇದೆಲ್ಲವನ್ನು ನೋಡುವುದಿಲ್ಲವೆ ? ಈ ಪ್ರಶ್ನೆ ಪೂರ್ಣತಃ ಗ್ರಾಮ ಅರ್ಥವ್ಯವಸ್ಥೆ, ಮಾನವತೆ, ಚಾರಿತ್ರ ನೈತಿಕತೆ ಮತ್ತು ಸಂಸ್ಕೃತಿ ಇವುಗಳಿಗೆ ಸಂಬಂಧಿಸಿದ್ದಾಗಿವೆ. ಈಗಂತೂ ಹತ್ಯೆಯ ಕಾರಣದಿಂದ ಪಶುಗಳ ಬೆಲೆ ಆಕಾಶವನ್ನು ಮುಟ್ಟಿದೆ. ಸಾಮಾನ್ಯ ರೈತ ಎತ್ತನ್ನು ಖರೀದಿಸಲು ಸಾಧ್ಯವೇ ಇಲ್ಲ. ಎತ್ತುಗಳಿಗೆ ಬಹಳ ಬೆಲೆ ಇರುವುದರಿಂದ ಅವುಗಳನ್ನು ಖರೀದಿಸುವ ಬದಲಿಗೆ ಮಾರಲು ಇಷ್ಟಪಡಲಾಗುತ್ತದೆ. ಭಾರತದಲ್ಲಿ ಮೊಗಲರ ಸಾಮ್ರಾಜ್ಯ ಇದ್ದಾಗ, ಅದಕ್ಕೂ ಮೊದಲು ಹಿಂದೂ ರಾಜರಿದ್ದಾಗಕೂಡ ಗೋವಂಶವನ್ನು ಅವಧ್ಯವೆಂದು ಪರಿಗಣಿಸಲಾಗಿತ್ತು.

ಆದರೆ ಇಂದು ಸಂವಿಧಾನ ಇದೆ, ಕಾನೂನು ಇದೆ. ಆದರೂ ಕೂಡ ಈಗ ಭಾರತದಲ್ಲಿ ಇಷ್ಟೊಂದು ಭಯಂಕರವಾಗಿಯೂ ವ್ಯಾಪಕವಾಗಿಯೂ ಗೋಹತ್ಯ ಆಗುತ್ತಿದೆ. ಇದು ದೇಶಕ್ಕೆ ಅಮಂಗಳಕಾರಿಯಾದುದಾಗಿದೆ. ಆದ್ದರಿಂದ ಕಾನೂನಿನಲ್ಲಿರುವ ಲೋಪದೋಷಗಳನ್ನು ಸರಿಪಡಿಸಿ ಸಂಪೂರ್ಣ ಗೋವಂಶ ಹತ್ಯೆ ನಿಲ್ಲುವಂತೆ ಸರ್ಕಾರ ಮಾಡಬೇಕು. ★

ಅಬ್ದುಲ್ ಗಫಾರ್‌ಖಾನ್ : ಖುದಾಯಿ ಖಿದಮತಗಾರ್

- ವಿನೋಬಾ

[ಇಡೀ ಆಧ್ಯಾತ್ಮಿಕ ಚಿಂತನದ ಗುರಿ 'ಗುಣಗ್ರಹಣ' ಎಂಬುದಾಗಿ ಭಾವಿಸಿದ್ದ ಸಂತ ವಿನೋಬಾ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು; ಕಾರಾಗೃಹ ವಾಸ ಅನುಭವಿಸಿದ್ದರು; ಆಶ್ರಮಗಳನ್ನು ಸ್ಥಾಪಿಸಿದ್ದರು. ಅವರು ತಮ್ಮ ಸಮಕಾಲಿನ ವ್ಯಕ್ತಿಗಳನ್ನು ರೇಖಾ ಚಿತ್ರಣದಂತೆ ಪರಿಚಯ ಮಾಡಿಕೊಟ್ಟಿದ್ದಾರೆ. ಅಂಥ ಲೇಖನಗ ಸರಣಿಯಲ್ಲಿ ಇದು ಹನ್ನೊಂದನೆಯದು. - ಸಂ.]

ವೇದದಲ್ಲಿ ವರ್ಣನೆ ಬಂದಿದೆ. **"ಆ ಪಕ್ಥಾಸೋ ಭಲಾನಸೋ ಭನಂತ್"**. ಪಕ್ಥ ಅಂದರೆ ಪಖ್ತೂನ್, ಪಠಾಣ. ಭಲಾನಸೋ ಅಂದರೆ ಉದ್ದ ನೆಯ ಮೂಗಿನವರು. ಪಖ್ತೂನಿಸ್ತಾನ ಅಂದರೆ ಎಲ್ಲಿ ಉದ್ದನೆಯ ಮೂಗಿನ ವರು ವಾಸವಾಗಿದ್ದಾರೋ ಆ ಸ್ಥಾನ. ಇದು ಬಾದಶಹ್‌ಖಾನ್‌ಸಾಹೇಬ್‌ರ ವರ್ಣನೆ. ಹಿರಿಯರಾದ ಬಾದಶಾಹಖಾನ್‌ರ ನೆನಪು ನಿರಂತರ ಬರುತ್ತಿರುತ್ತದೆ. ವರ್ಧಾ ಗೋಪುರಿ ಬಳಿ 'ಗೀತಾಯಿ'ಯ ಶಿಲಾಲೇಖನಗಳಲ್ಲಿ ಮೊದಲನೆಯ ದನ್ನು ಅವರಿಂದಲೇ ಹಾಕಿಸಲಾಯಿತು.

ನಾವು ಬಾದಶಾಹಖಾನ್‌ರನ್ನು 'ಗಡಿನಾಡಿನ ಗಾಂಧೀ' ಎಂಬುದಾಗಿ ಕರೆ ಯುತ್ತೇವೆ. ಅವರು ದೇವರ ಸೇವಕರಿದ್ದಾರೆ, ವಿಶ್ವದ ಸೇವಕರಿದ್ದಾರೆ, ಅವರು ಪಾಕಿಸ್ತಾನದ ಸ್ನೇಹಿತರೂ ಆಗಿದ್ದಾರೆ, ಹಿಂದುಸ್ತಾನದ ಸ್ನೇಹಿತರೂ ಆಗಿದ್ದಾರೆ, ಅಂತೆಯೇ ಇಡೀ ವಿಶ್ವದ ಸ್ನೇಹಿತರೂ ಸಹ. ಅವರು ಕಾರಾಗೃಹ ದಲ್ಲಿ ಇರಬೇಕಾಯಿತು. ಈ ವಿಷಯದಲ್ಲಿ ನನಗೆ ದುಃಖವೆನಿಸಲಿಲ್ಲ. ಏಕೆಂದರೆ ಅವರ ಈ ತಪಸ್ಸಿನ ಕಾರಣದಿಂದ ಹಿಂದುಳಿದ ಎಲ್ಲರ ಮನಸ್ಸು ಒಂದಲ್ಲ ಒಂದ ದಿನ ಒಂದಾಗಲಿದೆ. ದೇವರು ಅವರ ತಪಸ್ಸನ್ನು ಸಫಲ ಮಾಡುವನು. ಈ ಬಗ್ಗೆ ನನಗೆ ಸಂದೇಹವಿಲ್ಲ.

ರಾಜಗೀರ್‌ನಲ್ಲಿ ನಡೆದ ಸರ್ವೋದಯ ಸಮ್ಮೇಳನಕ್ಕೆ ಬರಬೇಕೆಂದು ನಾನು ಖಾನ್‌ಸಾಹೇಬರಿಗೆ ಆಮಂತ್ರಣ ಕೊಟ್ಟಿದ್ದೆ. ಆದರೆ ಅಹಮ್ಮದಾಬಾದ್‌ನಲ್ಲಿ ಕೋಮು ಗಲಭೆಗಳು ನಡೆದುವಾದ್ದರಿಂದ ಪರಿಸ್ಥಿತಿ ಬಿಗಡಾಯಿಸಿತು: ಅವರು ಆ ಸ್ಥಳದಲ್ಲಿಯೇ ಇರಬೇಕೆಂದು ಬಯಸಿದರು. ಎಲ್ಲರೂ ಅವರವರ ಅಂತರಾತ್ಮ ಹೇಳಿದ ಹಾಗೆ ಮಾಡುವುದೇ ಸರಿ. ಈ ಮನುಷ್ಯನದು ದೇವರೊಂದಿಗೆ ಒಂದಲ್ಲ ಒಂದು ಸಂಬಂಧವಿದೆ.

ಈ ಸಮಯದಲ್ಲಿ ಖಾನಸಾಹೇಬರು ಭಾರತಕ್ಕೆ ಬರುವುದೆಂದರೆ ಗಾಂಧೀಜಿಯವರ ಪುನರಾಗಮನವಿದ್ದಂತೆ. ಮಹಾತ್ಮಾ ಗಾಂಧೀಜಿಯವರ ಬಲಿದಾನ ಯಾವ ಪ್ರಶ್ನೆಗಳಿಗಾಗಿ ಆಗಿತ್ತೋ ಆ ಪ್ರಶ್ನೆಗಳೇ ಪುನಃ ತಲೆಯೆತ್ತಿವೆ. ಇಂಥ ಸಮಯದಲ್ಲಿ ಭಾರತಕ್ಕೆ ಅವರ ಆಗಮನ ಒಂದು ಪ್ರಕಾರ ಗಾಂಧೀಜಿಯವರ ಅವತರಣವೇ. ಎರಡನೇ ಬಾರಿ ಗಾಂಧೀಜಿ ನಮ್ಮ ಮಧ್ಯೆ ಬಂದಿದಾರೇನೋ ಎಂಬನಿಸಿಕೆ ನನ್ನದಾಗಿತ್ತು. ಸರ್ವೋದಯ ಸಮ್ಮೇಳನದಲ್ಲಿ ಲಕ್ಷಾಂತರ ಜನರ ಎದುರಿನಲ್ಲಿ ನಾನು ಈ ಮಾತನ್ನೇ ಹೇಳಿದೆ. ಇಪ್ಪತ್ತು ವರ್ಷಗಳ ಅನಂತರ ನಮ್ಮ ದೊಡ್ಡ ಅಣ್ಣ ಭಾರತಕ್ಕೆ ಬರುತ್ತಿದ್ದಾರೆ. ಆದ್ದರಿಂದ ಅವರನ್ನು ಭೇಟಿ ಮಾಡಲು ನಾನು ಸೇವಾಗ್ರಾಮಕ್ಕೆ ಹೋಗಬೇಕೆಂದು ಸಭೆಗೆ ತಿಳಿಸಿದೆ. ಇಂದು ನಮ್ಮೆದುರು ಸಮಸ್ಯೆಗಳನೇಕವಿವೆ. ಆದರೆ ಹೆದರಬೇಕಾಗಿಲ್ಲ. ಏಕೆಂದರೆ ಜನತೆಯ ಮನಸ್ಸು ಪವಿತ್ರವಾಗಿದೆ. ನಾವು ಶಾಂತಿಯಿಂದ ಕುಳಿತು ವಿಚಾರ ವಿಮರ್ಶೆ ಮಾಡಿದರೆ ಯಾವುದಾದರೂ ಪರಿಹಾರ ಸಿಕ್ಕೇಸಿಗುವುದೆಂಬ ಆಸೆಯಿದೆ.

ಅವರು ಕಾಬೂಲ್‌ನಲ್ಲಿದ್ದಾಗ ನಾನು ಅವರಿಗೆ ಒಂದು ಪತ್ರ ಬರೆದಿದ್ದೆ. (ಆ ಪತ್ರವನ್ನು ಈ ಲೇಖನದ ಕೊನೆಯಲ್ಲಿ ಕೊಟ್ಟಿದೆ.) ಆ ಪತ್ರದಲ್ಲಿ ನಾನು ಈ ರೀತಿ ಬರೆದಿದ್ದೆ. “ನೀವು ಯಾವ ಸ್ಥಿತಿಯಲ್ಲಿ ಇರಬೇಕಾಗಿದೆಯೋ ಅದನ್ನು ನಾನು ಈ ರೀತಿ ಅರ್ಥ ಮಾಡುತ್ತೇನೆ: ನಿಮ್ಮ ಉಪಯೋಗ ಒಂದು ದೇಶಕ್ಕೆ ಮಾತ್ರ ಅಲ್ಲ, ಇಡೀ ವಿಶ್ವದ ಸೇವೆಗಾಗಿ ಇದೆ ಎಂಬುದೇ ದೇವರ ಇಚ್ಛೆಯಾಗಿದೆ. ಖಾನಸಾಹೇಬರಿಗೆ ಭಾರತದ ಕಡೆಯಿಂದ ಬಹಳ ಅನ್ಯಾಯವಾಯಿತು. ಅದಕ್ಕಾಗಿ ನನಗೆ ದುಃಖವಿದೆ. ಗೀತೆಯಲ್ಲಿ ಹೇಳಲಾದಂಥ ಪಾಪವು ನಮ್ಮ ಕಡೆಯಿಂದ ಆಗಿದೆ. ಮಿತ್ರದ್ರೋಹೇಚ ಪಾತಕಮ್. ಯಾವ ಮನುಷ್ಯ ನಮ್ಮ ಸ್ನೇಹ ಮಾಡಿದನೋ, ಯಾರು ಆಜೀವ ನಮ್ಮ ಮಿತ್ರನಾಗಿದ್ದನೋ, ಇಂದೂ ಕೂಡ ಮಿತ್ರನಾಗಿದ್ದಾನೊ ಅಂಥವನ ಪರಿವೆಯನ್ನು ನಾವು ಮಾಡಲಿಲ್ಲ. ಸ್ವಾತಂತ್ರ್ಯದ ಪ್ರಾಪ್ತಿಯ ಲೋಭಕ್ಕೆ ಒಳಗಾಗಿ ತಪ್ಪು ಮಾಡಿದೆವು. ಅದಕ್ಕಾಗಿ ನನಗೆ ನಾಚಿಕೆಯಾಗಿದೆ.

ಖಾನಸಾಹೇಬರು ಹಿಂದುಸ್ತಾನ-ಪಾಕಿಸ್ತಾನದ ವಿಭಾಗವನ್ನು ಒಪ್ಪಿರಲಿಲ್ಲ. ನಾನು ಮೊದಲಿನಿಂದಲೂ ಅದಕ್ಕೆ ಅತ್ಯಂತ ವಿರೋಧಿಯಾಗಿದ್ದೆ. ಆದದ್ದು ಆಗಿ ಹೋಯಿತು. ಆದರೆ ನಾವು ಎರಡು ಕೆಲಸ ಮಾಡಿದರೆ ಆ ತಪ್ಪನ್ನು ಸರಿಮಾಡಬಹುದೆಂಬ ವಿಶ್ವಾಸ ನನಗಿದೆ. ಒಂದು, ಬಡವರನ್ನು ನಮ್ಮವರನ್ನಾಗಿ ಮಾಡಿಕೊಳ್ಳಬೇಕು. ಹಿಂದುಸ್ಥಾನದಲ್ಲಿ ನಮ್ಮ ಬಗ್ಗೆ ಚಿಂತೆಮಾಡುವವರಿದ್ದಾರೆ ಎಂದು ಅವರಿಗೆ ಅನಿಸಬೇಕು. ಆಗ ನಮಗೆ ಸಾಮ್ಯವಾದದಿಂದ

ಯಾವ ಅಪಾಯವೂ ಇರುವುದಿಲ್ಲ. ಎರಡನೇಯದು, ಎಲ್ಲ ಧರ್ಮಗಳು ಪರಿಸ್ಪರ ಪ್ರೇಮದಿಂದ ಇರುವ ಹಾಗೆ ಆಗಬೇಕು.

ಒಂದು ಮಾತು ನಿಶ್ಚಿತ. ಎಲ್ಲಿಯ ವರೆಗೆ ಅಫಗಾನಿಸ್ಥಾನದಿಂದ ಹಿಡಿದು ಬರ್ಮಾ, ಸಿಲೋನ್ ವರೆಗೆ ಯಾವುದನ್ನು ನಾನು ಎ.ಬಿ.ಸಿ. ತ್ರಿಕೋಣವೆಂದು ಕರೆಯುತ್ತೇನೋ, ಅವೆಲ್ಲವೂ ಒಂದು ಆಗುವುದಿಲ್ಲವೋ, ಅಲ್ಲಿಯ ವರೆಗೆ ನಾನು ಶಾಂತಿಯ ಆಶೆ ಹೊಂದುವುದಿಲ್ಲ.

ಇನ್ನೊಂದು ಮಾತು. ಖಾನಸಾಹೇಬರು ಮೂರ್ತಿಯನ್ನು ಮಾಡುವುದರಿಂದ ಏನು ಲಾಭವೆಂದು ಕೇಳಿದ್ದಾರೆ. (ವರ್ಧಾದಲ್ಲಿ ಖಾನಸಾಹೇಬರ ಹಸ್ತ ಗಾಂಧೀಜಿಯವರ ಮೂರ್ತಿಯನ್ನು ಅನಾವರಣಮಾಡಿಸಲಾಗಿತ್ತು.) ಆದರೆ ಹಿಂದುಸ್ಥಾನದಲ್ಲಿ ಮೂರ್ತಿಗಳನ್ನು ನಿರ್ಮಿಸಲಾಗುತ್ತಿದೆ. ನಾನು ಅದನ್ನು ಬೇಡ ಅನ್ನುವುದಿಲ್ಲ. ಏಕೆಂದರೆ ಜನರು ಮೂರ್ತಿಯನ್ನು ಬಹಳ ಪ್ರೇಮಪೂರ್ವಕ ಮಾಡುತ್ತಾರೆ ಮತ್ತು ಒಳ್ಳೆಯ ಉದ್ದೇಶ್ಯದಿಂದ ಮಾಡುತ್ತಾರೆ. ಆದರೆ ಮನಸ್ಸಿಗೆ ಅದರಿಂದ ಸಮಾಧಾನವಾಗುವುದಿಲ್ಲ. ಸ್ವಲ್ಪ ದುಃಖವೇ ಆಗುತ್ತದೆ.

ಈ ಸಲ ಖಾನಸಾಹೇಬರು ಬಂದಿದ್ದರಿಂದ ಬಹಳ ಲಾಭವೇ ಆಯಿತು. ವರ್ಷದಲ್ಲಿ ಒಂದು ಸಲವಾದರೂ ಅವರು ಸ್ವಲ್ಪ ಸಮಯವನ್ನು ಸೇವಾಗ್ರಾಮದಲ್ಲಿ ಕಳೆಯಬೇಕೆಂದು ನಾನು ಬಯಸುತ್ತೇನೆ. ಬಾಪೂ ೧೨೫ ವರ್ಷ ಬದುಕುವ ಇಚ್ಛೆ ಇಟ್ಟುಕೊಂಡಿದ್ದರು. ಅದು ಸಾಧ್ಯವಾಗಲಿಲ್ಲ. ಅವರ ಇಚ್ಛೆಯನ್ನು ನೆರವೇರಿಸುವ ಹೊಣೆ ಖಾನಸಾಹೇಬರದಾಗಿದೆ, ಅವರು ನೂರು ವರ್ಷವಾದರೂ ಪೂರ್ತಗೊಳಿಸಬೇಕು. ಅದಕ್ಕಾಗಿ ಅವರು ತಮ್ಮ ಆರೋಗ್ಯದ ಕಡೆಗೆ ಗಮನ ಕೊಡಬೇಕು ★

ಬ್ರಹ್ಮವಿದ್ಯಾ ಮಂದಿರ
೫-೪-೧೯೬೫

ನನ್ನ ಪ್ರಿಯ ಬಾದಶಾಹಖಾನ,

ನಮ್ಮ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ನಿಮ್ಮ ಬಗ್ಗೆ ಬಹಳ ಅನ್ಯಾಯವಾಯಿತು ಮತ್ತು ನಮ್ಮ ಮಿತ್ರರು ನಿಮ್ಮ ಕೈ ಬಿಟ್ಟರು. ಇದನ್ನು ನಾನು ಅತೀವ ದುಃಖದಿಂದ ಒಪ್ಪುತ್ತೇನೆ. ಆದರೆ ನೀವು ಅತ್ಯಂತ ಧೈರ್ಯ ಮತ್ತು ಕ್ಷಮಾಶೀಲರಾಗಿ ಸಹಿಸಿಕೊಂಡಿದ್ದೀರಿ. ನಿಮ್ಮ ಈ ಉದಾಹರಣೆ ಎಲ್ಲರಿಗೂ ಒಂದು ಪ್ರೇರಣೆಯ ಮೂಲವಾಗಿದೆ.

ಕಡೇ ರಕ್ಷಾ ಪುಟ ನೋಡಿ

ಸದಾಚಾರ ವಿಧಾಯಿನೀ -೨

--ಬಾಬು ರಾಮಚಂದ್ರ ಶರ್ಮ

ಭಾಷಾಂತರ ಮತ್ತು ಟಿಪ್ಪಣಿ : --ಉಮಾಕಾಂತಭಟ್ಟ

[ಬಾಬು ರಾಮಚಂದ್ರಶರ್ಮ ಬಹಳ ಉಪಯುಕ್ತರವಾದ ಕೆಲಸ ಮಾಡಿದ್ದಾರೆ. ಸದಾಚಾರವೇ ಮನುಷ್ಯನನ್ನು ಸಂಸಾರಸಾಗರದಲ್ಲಿ ತೇಲಿಸುತ್ತದೆ. ಅಂಥ ಸದಾಚಾರಗಳನ್ನು ಒಂದೊಂದೇ ವಾಕ್ಯದಲ್ಲಿ ಬರೆದಿದ್ದಾರೆ. ಅದರ ಕನ್ನಡ ಅನುವಾದ ಟಿಪ್ಪಣಿ ಸಹಿತ ಇಲ್ಲಿ ಪ್ರಸ್ತುತಗೊಂಡಿದೆ. -ಸಂ]

೭. ಈಶ್ವರಸ್ವರೂಪಂ ವೇದೇನ ಜಾನೀಯಾತ್

ಭಗವಂತನ ಸ್ವರೂಪವನ್ನು ವೇದದಿಂದ ನಿಶ್ಚಯಿಸಬೇಕು.

ಜಗತ್ತು, ಜೀವ ಮತ್ತು ಈಶ್ವರ ಎಂದು ಮೂರು ತತ್ವಗಳು ಪ್ರಸಿದ್ಧವಾಗಿವೆ. ಅವುಗಳನ್ನು ಅರ್ಥಮಾಡಿಕೊಳ್ಳುವುದೇ ಬದುಕಿನ ಗುರಿ. ಇದಕ್ಕೆ ಸಮುಚಿತವಾದ ಶಿಕ್ಷಣ ಬೇಕು. ಚರಾತ್ಮಕವಾದ ಜಗತ್ತಿನ ಬಗ್ಗೆ ಖಚಿತವಾದ ಅರಿವನ್ನು ವಿಜ್ಞಾನಿಗಳು ಮೂಡಿಸಿದರೆ ಜೀವ ಮತ್ತು ಈಶ್ವರನ ಬಗ್ಗೆ ತತ್ವಶಾಸ್ತ್ರ ಮತ್ತು ವೇದಾಂತಗಳು ತಿಳುವಳಿಕೆಯನ್ನು ಉಂಟುಮಾಡುತ್ತವೆ. ಆದುದರಿಂದ ಶಿಕ್ಷಣದ ಸಮಗ್ರತೆಗೆ ಈ ಎಲ್ಲ ವಿಷಯಗಳ ಅಳವಡಿಕೆ ಅನಿವಾರ್ಯ.

ಜಗತ್ತು ಜಡ, ಪರತಂತ್ರ. ಜೀವ ಚೇತನ, ಸ್ವತಂತ್ರ. ಜೀವ ಜಗತ್ತಿನ ಸಂಬಂಧವೇ ಜೀವನ. ಜಡ-ಚೇತನ ಸಂಬಂಧಾನುಬಂಧಗಳು ಹೇಗಾದವು ಎಂಬ ಕುತೂಹಲ ಯಾರಿಗಿಲ್ಲ ? ಇವುಗಳನ್ನು ನಿಯಂತ್ರಿಸುವ ಮಹಾಚೇತನ ಈಶ್ವರ. ಅವನ ಅಂಕೆಗೆ ಎಲ್ಲವೂ ಒಳಪಟ್ಟಿವೆ. ಅವನ ಆಣತಿಯಿಲ್ಲದೆ ಹುಲ್ಲುಕಡ್ಡಿಯೂ ಅಲ್ಲಾಡದು. ಸರ್ವಶಕ್ತನಾದ ಆ ಪ್ರಭುವನ್ನು ಅರ್ಥಮಾಡಿಕೊಂಡು ಅವನಿಗೆ ನಮ್ಮನ್ನು ಅರ್ಪಿಸಿಕೊಂಡ ಹೊರತು ನಮ್ಮ ಕಷ್ಟಕೋಟಲೆಗಳಿಗೆ ಕೊನೆಯಿಲ್ಲ. ನಾವು ಜೀವಿಗಳು. ಶಾಂತಿ ಸಮಾಧಾನಗಳಿಗೆ ಆ ಮಹಾದೇವನನ್ನು ಪ್ರಾರ್ಥಿಸಬೇಕು. ಅವನನ್ನು ಧ್ಯಾನಿಸಬೇಕು. ಈ ಈಶ್ವರ ಪ್ರಣಿಧಾನಕ್ಕೆ ಈಶ್ವರ ತತ್ವದ ಪರಿಜ್ಞಾನ ಅಗತ್ಯ. ಇದರ ಮಾರ್ಗವೇನು ?

ವೇದಗಳು ಅಪಾರ ಜ್ಞಾನನಿಧಿ. ಪರಮೇಶ್ವರನೆ ಕೊಟ್ಟ ಅಮೂಲ್ಯ ಸಂಪದ. ಅವುಗಳ ಅಧ್ಯಯನದಿಂದ ತತ್ವತ್ರಯದ ರಹಸ್ಯವನ್ನು ಅರಿಯಬಲ್ಲೆವು. ಈಶ್ವರನ ವಿಷಯದಲ್ಲಿ ವೇದಗಳೇ ಪರಮಪ್ರಮಾಣ. ಅವನ ಬಗ್ಗೆ ಅವನ ಮಾತುಗಳಷ್ಟು ಹತ್ತಿರ ಬೇರೆ ಯಾವುದು ಇದ್ದೀತು? ವೇದಗಳಂತೆ ಇತಿಹಾಸ - ಪುರಾಣಗಳು, ಶಾಸ್ತ್ರ-ಸ್ಮೃತಿಗಳು ಈಶ್ವರ ತತ್ವವನ್ನು ನಿಖರವಾಗಿ ನಿರೂಪಿಸುತ್ತವೆ. ಆದುದರಿಂದ ಸಾಕ್ಷಾತ್ ವೇದಗಳ ಮೂಲಕ ಅಥವಾ ಇತಿಹಾಸ ಪುರಾಣಗಳ ಮೂಲಕ

ಈಶ್ವರನ ಸ್ವರೂಪವನ್ನು ನಿಶ್ಚಯಿಸುವುದು ಸೂಕ್ತ.

೮ ಪ್ರಾತಃ ಪ್ರಾತಃ ಸ್ನಾಯಾತ್

ದಿನಾಲೂ ಬೆಳಿಗ್ಗೆ ಸ್ನಾನವನ್ನು ಮಾಡಬೇಕು.

ದೇಹ ನಮ್ಮೆಲ್ಲರ ಬದುಕಿನ ಮೂಲಾಧಾರ. ದೇಹವು ಹೇಗೆ ಇರುತ್ತದೆಯೋ ಹಾಗೆ ಬದುಕು ನಿರ್ಮಾಣವಾಗುತ್ತದೆ. ಶರೀರದಂತೆ ಆರೋಗ್ಯ; ಆರೋಗ್ಯದಂತೆ ಮನೋಧರ್ಮ, ಮನೋಧರ್ಮದಂತೆ ಜೀವನ. ಆದುದರಿಂದ ಸ್ವಸ್ಥ ಜೀವನವನ್ನು ಬಯಸುವವರು ದೇಹವನ್ನು ಚೆನ್ನಾಗಿ ರಕ್ಷಿಸಿಕೊಳ್ಳಬೇಕು. ಈ ದೇಹವು ನಿರಂತರವಾಗಿ ಪರಿವರ್ತನೆಯನ್ನು ಹೊಂದುತ್ತಲೇ ಇರುತ್ತದೆ. ಆಯುರ್ಮಾನಕ್ಕೆ ಅನುಗುಣವಾಗಿ ಕೆಲವು ಕಾಲ ಬೆಳೆಯುತ್ತ ಸಾಗಿ ಆಮೇಲೆ ನಶಿಸಲು-ಕ್ಷೀಣಿಸಲು ಆರಂಭಿಸುತ್ತದೆ. ಸರ್ವಸಾಧನವಾದ ನಮ್ಮ ದೇಹದಲ್ಲಿ ಕೊಳೆ ಹುಟ್ಟುತ್ತ ಇರುತ್ತದೆ. ಅದನ್ನು ದೇಹವು ನವದ್ವಾರಗಳಿಂದ ಹೊರಕ್ಕೆ ತಳ್ಳುತ್ತ ಇರುತ್ತದೆ. ಆದುದರಿಂದ ಈ ದೇಹವನ್ನೂ, ಅದರ ದ್ವಾರಗಳನ್ನೂ ಶುದ್ಧವಾಗಿ ಇಟ್ಟುಕೊಳ್ಳುವುದು ಹಿತಕರ.

ದೇಹಶುದ್ಧಿಯ ಸುಲಭೋಪಾಯ ಸ್ನಾನ, ಜಳಕದಿಂದ ಮೈಕೊಳೆ ತೊಳೆದು ಹೋಗುತ್ತದೆ. ಅಂಗಾಂಗಗಳು ಪುಳಕಗೊಂಡು ಹುರುಪಾಗುತ್ತವೆ. ಶರೀರದಲ್ಲಿ ಹೊಸತನ ಹುಟ್ಟಿ, ಕಾಂತಿಯು ಹೆಚ್ಚುತ್ತದೆ. ಹೊರಚರ್ಮ ಮೃದುವಾಗಿ ಕಂಗೊಳಿಸುತ್ತದೆ. ಮೈ ಸುಗಂಧಿತವಾಗುತ್ತದೆ. ಮನಸ್ಸು ಲಘುವಾಗಿ ಪ್ರಸನ್ನತೆಗೆ ನೆಲೆಯಾಗುತ್ತದೆ.

ಪ್ರಾತಃಕಾಲದ ಸ್ನಾನ ಅತ್ಯಂತ ಆಪ್ಯಾಯನ, ಅರುಣೋದಯಕ್ಕೆ ಎದ್ದು ಶೌಚವನ್ನು ಪೂರೈಸಿ, ಹಲ್ಲುಜ್ಜಿ ಸ್ನಾನ ಮಾಡುವ ಅಭ್ಯಾಸದಿಂದ ಆರೋಗ್ಯವು ಕೂಡಿ ಬಂದು ಆಯುಷ್ಯವೂ ವರ್ಧಿಸುತ್ತದೆ! ಮುಂಜಾವಿನಲ್ಲಿ ಹೊಳೆ-ಕೆರೆಗಳಲ್ಲಿ ಈಜಾಡುವುದಂತೂ ಸುಂದರ, ಸುಸ್ವಸ್ಥ ಜೀವನಕ್ಕೆ ಸೋಪಾನ.

೯ ಧೌತೇ ವಸ್ತ್ರೇ ಪರಿದಧ್ಯಾತ್

ಶುಭ್ರವಾದ ವಸ್ತ್ರಗಳನ್ನು ಧರಿಸಬೇಕು.

ಅಶನ, ವಸನ, ವಸತಿಗಳು ಮಾನವನ ಮೂಲಭೂತ ಆವಶ್ಯಕತೆಗಳು. ಇವುಗಳನ್ನು ನಿವಾರಿಸಿ ಯಾರೂ ಜೀವಿಸಲಾರರು. ಸಾಧನೆಯಿಂದ ಇವುಗಳ ಉಪಯೋಗದಲ್ಲಿ ಸಂಯಮವನ್ನು ಪಡೆದುಕೊಳ್ಳಬಹುದಷ್ಟೆ! ಈ ಆವಶ್ಯಕತ್ರಯದಲ್ಲಿ ಬಟ್ಟೆಯ ಪ್ರಾಶಸ್ತ್ಯವನ್ನು ಎಲ್ಲರೂ ಮನಗಂಡವರೆ, ಬಟ್ಟೆ ನಾಗರಿಕತೆಯ ಸಂಕೇತ. ಇದು ವ್ಯಕ್ತಿಯ ಸ್ಥಾನಮಾನಗಳ ಅಳತೆಗೋಲು

ಸಂಸ್ಕಾರಗಳ ದ್ಯೋತಕ . ಮನಸ್ಸನ್ನು ಬಿಂಬಿಸುವ ಕನ್ನಡಿ. ಮಾನ ಮುಚ್ಚುವ ಬಟ್ಟೆ ದೇಹವನ್ನು ಗಾಳಿ, ಬಿಸಿಲು, ಧೂಳು, ಸೋಂಕುಗಳಿಂದ ರಕ್ಷಣೆ ಮಾಡುವ ಕವಚವೂ ಆಗಿದೆ. ಬಟ್ಟೆಯಂತೆ ಬದುಕು; ಬದುಕಿನಂತೆ ಬಟ್ಟೆ.

ನೂಲು ಯಾವುದಾದರೂ ಆಗಲಿ, ಬಣ್ಣ ಯಾವುದಾದರೂ ಇರಲಿ, ನೇಯ್ಗೆ ಹೇಗಾದರೂ ಆಗಲಿ, ಹೊಲಿಗೆ ಎಂತಾದರೂ ಒಪ್ಪಿರಲಿ, ಬಟ್ಟೆ ಚೊಕ್ಕಟವಾಗಿರಬೇಕು. ಮಡಿಮಾಡಿ ಓರಣವಾಗಿ ಒಣಗಿಸಿದ ಅಂದವಾದ ಬಟ್ಟೆಗಳನ್ನು ಉಟ್ಟುಕೊಳ್ಳಬೇಕು, ಅಂತಹ ಬಟ್ಟೆಗಳನ್ನುಟ್ಟವರಿಗೆ ಹಿತ; ನೋಡುವವರಿಗೆ ಸುಖ.

೧೦ ನ ಕಚ್ಚರಂ ಧಾರಯೇತ್

ಹರಿದ ಬಟ್ಟೆಯನ್ನು ತೊಡಬಾರದು.

ಶ್ರೀಮಂತರು ಒಳ್ಳೆಯ ದುಬಾರಿ ಬಟ್ಟೆಗಳನ್ನು ತೊಟ್ಟುಕೊಳ್ಳಬಹುದು. ಆದರೆ ಬಡವರಿಗೆ ಅಂತಹ ಹೊಸ ಹೊಸ ಬಟ್ಟೆಗಳನ್ನು ಕೊಂಡು ಉಡಲಾಗದು. ಅವರು ಹಳೆಯ ವಸ್ತ್ರಗಳನ್ನೇ ಮಡಿಮಾಡಿ ಧರಿಸಿಕೊಳ್ಳಬೇಕಾಗುತ್ತದೆ. ಬಳಸುತ್ತ ಬಟ್ಟೆ ಹರಿದುಹೋಗಬಹುದು. ಆಗ ಅದನ್ನು ಹೊಲಿದುಕೊಂಡೇ ಉಡಬೇಕು. ಯಾವ ಕಾರಣದಿಂದಲೂ ಹರಿದ ಬಟ್ಟೆಗಳನ್ನು ತೊಡಬಾರದು. ಆದರಿಂದ ಸಾಮಾಜಿಕ ತಿರಸ್ಕಾರಕ್ಕೆ ವ್ಯಕ್ತಿ ಗುರಿಯಾಗುತ್ತಾನೆ. ತನ್ನ ಮೈ ಮುಚ್ಚಿಕೊಳ್ಳಲಾರ. ಮೈಮೇಲೆ ಬಟ್ಟೆಯಿದ್ದೂ ಪ್ರಯೋಜನವಿಲ್ಲ. ತನ್ನ ಮನಸ್ಸಿಗೂ ಕಿರಿ ಕಿರಿ ತಪ್ಪದು. ಚಿಂದಿ ಬಟ್ಟೆಯು ದಾರಿದ್ರ್ಯವನ್ನು ಕೈಮಾಡಿ ಕರೆಯುತ್ತದೆ. ಆದುದರಿಂದ ಯಾರೂ ಹರಿದ ಬಟ್ಟೆಯನ್ನು ತೊಡಬಾರದು.

೧೧ ನ ಪರಕೀಯಮವಸನಂ ವಸೀತ

ಇನ್ನೊಬ್ಬರ ಬಟ್ಟೆಯನ್ನು ಉಡಬಾರದು.

ನಮ್ಮ ಬಟ್ಟೆ ನಮಗೆ; ಇನ್ನೊಬ್ಬರ ಬಟ್ಟೆ ಅವರಿಗೆ. ಪ್ರೀತಿ, ಆದರ, ವಿಶ್ವಾಸ ಇವುಗಳ ನೆಪದಿಂದ ಬೇರೆಯವರ ಬಟ್ಟೆಗಳನ್ನು ತೊಡುವುದು ಒಳ್ಳೆಯದಲ್ಲ. ಇನ್ನೊಬ್ಬರ ಬಟ್ಟೆಯನ್ನು ಉಪಯೋಗಿಸಿದರೆ ಸೋಂಕು ತಗಲುವ ಸಂಭವವಿದೆ. ಕಾಲ ಕಳೆದಂತೆ ಅದು ಒಂದು ಬಗೆಯ ಹಂಗನ್ನು ಬೆಳೆಸಿ ವ್ಯಕ್ತಿಯನ್ನು ಹಗುರಗೊಳಿಸುತ್ತದೆ,

ಗುಣನಿವೇದನೆ ೨೯ ನೇ ಪುಟದಿಂದ

ಇಡೀ ಭಾರತ ಮತ್ತು ಪೂರ್ವ ಪಾಕಿಸ್ತಾನದ ಕೆಲವು ಭಾಗಗಳಲ್ಲಿ ನನ್ನ ಪಾದಯಾತ್ರೆಯ ಸಂದರ್ಭದಲ್ಲಿ ನಾನು ಯಾವಾಗಲೂ ನಿಮ್ಮನ್ನು ನೆನೆಯುತ್ತಿದ್ದೆ. ಪಾಕಿಸ್ತಾನದಲ್ಲಿಯೂ ಇಂಥ ಒಂದು ಆಂದೋಲನವನ್ನು ನಡೆಸಲು ಅಲ್ಲಿಯ ಪರಿಸ್ಥಿತಿ ನಿಮಗೆ ಅನುವು ಮಾಡಿಕೊಡುವುದೆಂದು ನಾನು ಆಸೆ ಇಟ್ಟುಕೊಂಡಿದ್ದೆ. ಆದರೆ ಹಾಗೆ ಆಗಲಿಲ್ಲ. ದೇವರ ಇಚ್ಛೆ ಬೇರೆಯೇ ಇತ್ತೆಂದು ತೋರುತ್ತದೆ.

ಈ ಅಣುಯುಗದಲ್ಲಿ ತಥಾಕಥಿತ ರಾಜಕಾರಣದ ಕಾಲ ಮುಗಿಯಿತೆಂದೂ, ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಸಮಸ್ಯೆಗಳಿಗ ಪರಿಹಾರ ಅಧ್ಯಾತ್ಮದ ಆಧಾರದ ಮೇಲೆಯೇ ದೊರೆಯಲು ಸಾಧ್ಯವೆಂದೂ ನನಗೆ ದೃಢವಾಗಿ ಅನಿಸುತ್ತಿದೆ. ನೀವು ರಾಜಕಾರಣದ ಮನುಷ್ಯರಲ್ಲವೆಂದು ನಾನು ತಿಳಿದಿದ್ದೇನೆ. ನೀವು ಆಳವಾದ ಆಧ್ಯಾತ್ಮಿಕ ನಿಷ್ಠೆಯುಳ್ಳ ಈಶ್ವರಭಕ್ತರಾಗಿದ್ದೀರಿ. ನೀವು ಯಾವಾಗಲೂ ಅಹಿಂಸೆ ಮತ್ತು ಸಹನಶೀಲತೆಯ ಪ್ರಖರ ಸಾಕಾರವಾಗಿದ್ದೀರಿ. ನಿಮ್ಮನ್ನು ಈ ಪರೀಕ್ಷೆಗೆ ಒಡ್ಡಿ ದೇವರು ನಿಮ್ಮನ್ನು ವಿಶ್ವ ಸಮಸ್ಯೆಗಳ ಪರಿಹಾರಕ್ಕೆ ಸಾಧನವನ್ನಾಗಿ ಮಾಡಲು ಬಯಸುತ್ತಿರಬಹುದು.

ಸ್ನೇಹಾದರದೊಂದಿಗೆ,

ನಿಮ್ಮ ತಮ್ಮ,

ವಿನೋಬಾ

KA-SK-MND-470/2000

ತೆರೆದ-ಅಂಚೆ

Vol 1 Issue 8,

To

Janapada Vichara – Kannada Monthly Digest Edited and Printed by Surendra Koulagi at Janapada Seva Trust Printing Press, Melkote on behalf of Janapada Seva Trust, (Regd) Melkote, Dist – Mandya 571 431.

Phone : 08236/58754